# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಬುಧವಾರ, ಅಕ್ಟೋಬರ್ 21, 2020

ಸಂಪುಟ : 47 ಸಂಚಿಕೆ : 172 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com




ನಗರ ದೇವತೆ ಶ್ರೀ ದುಗ್ಗಮ್ಮ ದೇವಸ್ಥಾನದಲ್ಲಿ ಶಾರದಾಂಬ ದೇವಿ (ವೀಣಾ) ಅಲಂಕಾರ



ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ಕೂಷ್ಮಾಂಡಾ ದೇವಿ ಅಲಂಕಾರ



ಶಿವಾಜಿ ನಗರದ ಶ್ರೀ ನಿಮಿಷಾಂಬ ದೇವಿ ದೇವಸ್ಥಾನದಲ್ಲಿ ಹಣ್ಣಿನ ಅಲಂಕಾರ



ರಿಂಗ್ ರಸ್ತೆಯ ಶ್ರೀ ಶಾರದಾಂಬೆ ದೇವಸ್ಥಾನದಲ್ಲಿ ಮಯೂರ ವಾಹನ ಅಲಂಕಾರ



ದಾವಲ್‌ಪೇಟೆ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ವಿಶೇಷ ವೀಳ್ಯೆದೆಲೆ ಅಲಂಕಾರ




ಎಸ್.ಓ.ಜಿ. ಕಾಲೋನಿ ಶ್ರೀ ಶನೈಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಚೌಡೇಶ್ವರಿ ದೇವಿಗೆ ಭಸ್ಮಾಲಂಕಾರ

## ಲಾಕ್‌ಡೌನ್ ಅಂತ್ಯವಾಗಿದೆ, ವೈರಸ್ ಅಲ್ಲ

ನವದೆಹಲಿ, ಅ. 20 – ಲಾಕ್‌ಡೌನ್ ಅಂತ್ಯವಾಗಿದೆಯೇ ಹೊರತು ವೈರಸ್ ಅಲ್ಲ ಎಂದಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಹಬ್ಬದ ದಿನಗಳಲ್ಲಿ ಕೊರೊನಾ ವೈರಸ್ ತಡೆಯಲು ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವಂತೆ ಮನವಿ ಮಾಡಿಕೊಂಡಿದ್ದಾರೆ.

ಕೊರೊನಾ ಹರಡಿದ ನಂತರ ಏಳನೇ ಬಾರಿ ದೇಶವನ್ನು ಉದ್ದೇಶಿಸಿ ಮಾತನಾಡಿರುವ ಪ್ರಧಾನಿ ಮೋದಿ, ಅಮೆರಿಕ ಹಾಗೂ ಯುರೋಪಿನ ಹಲವು ದೇಶಗಳಲ್ಲಿ ಕೊರೊನಾ ವೈರಸ್ ಹಠಾತ್ತನೆ ಭುಗಿಲೆದ್ದಿದೆ. ಈ ದೇಶಗಳಲ್ಲಿ ವೈರಸ್ ಸೋಂಕು ಕಡಿಮೆಯಾದ ನಂತರ ಮತ್ತೆ ತೀವ್ರವಾಗಿ ಹೆಚ್ಚಿದೆ. ಇದು ಪರಿಣಾಮಕಾರಿ ಔಷಧಿ ಬರುವವರೆಗೂ ಮುನ್ನೆಚ್ಚರಿಕೆಯ ಅಗತ್ಯವನ್ನು ತೋರಿಸುತ್ತದೆ ಎಂದು ಪ್ರಧಾನಿ ಹೇಳಿದ್ದಾರೆ.




ಭಾರತದಲ್ಲಿ ಹಲವಾರು ಜನರು ಮಾಸ್ಕ್ ಧರಿಸುವುದನ್ನು ನಿಲ್ಲಿಸಿದ ಇಲ್ಲವೇ ನಿರ್ಲಕ್ಷ್ಯ ತೋರಿದ ಹಲವಾರು ಚಿತ್ರ ಹಾಗೂ ವಿಡಿಯೋಗಳು ಬೆಳಕಿಗೆ ಬರುತ್ತಿವೆ. ಇದು ಸರಿಯಲ್ಲ. ಈ ರೀತಿಯ ನಿರ್ಲಕ್ಷ್ಯ ತೋರಿದವರು ತಮ್ಮನ್ನಷ್ಟೇ ಅಲ್ಲದೇ ತಮ್ಮ ಕುಟುಂಬದವರು, ಮಕ್ಕಳು ಹಾಗೂ ಹಿರಿಯರನ್ನೂ ಅಪಾಯಕ್ಕೆ ದೂಡುತ್ತಿದ್ದಾರೆ ಎಂದು ಮೋದಿ ತಿಳಿಸಿದ್ದಾರೆ.

ಲಾಕ್‌ಡೌನ್ ತೆರವುಗೊಳಿಸಿದ ನಂತರ ಆರ್ಥಿಕ ಚಟುವಟಿಕೆಗಳು ಚುರುಕಾಗಿದ್ದು ಜನರು ತಮ್ಮ ಜೀವನಕ್ಕೆ ಮರಳುತ್ತಿದ್ದಾರೆ ಹಾಗೂ ಗುಂಪುಗೂಡುವುದು ಹೆಚ್ಚಾಗುತ್ತಿದೆ. ಹಬ್ಬದ ದಿನಗಳಲ್ಲಿ ಮಾರುಕಟ್ಟೆಗಳಲ್ಲಿ ಜನ ಹೆಚ್ಚಾಗಿ ಸೇರುತ್ತಿದ್ದಾರೆ ಎಂದು ಪ್ರಧಾನಿ ಹೇಳಿದ್ದಾರೆ.

ಜನರು ಹಾಗೂ ಅವರ ಕುಟುಂಬದವರು ಸಂತೋಷವಾಗಿರುವುದನ್ನು ನೋಡಲು ಬಯಸುತ್ತೇನೆ. ಹೀಗಾಗಿ (3ನೇ ಪುಟಕ್ಕೆ)

## ಅರ್ಥಪೂರ್ಣ ರಾಜ್ಯೋತ್ಸವ



ದಾವಣಗೆರೆ, ಅ.20- ಕೋವಿಡ್ ನಿಯಂತ್ರಣ ಮಾರ್ಗ ಸೂಚಿ ಹಾಗೂ ಚುನಾವಣಾ ಮಾದರಿ ನೀತಿ ಸಂಹಿತೆಯನ್ನು ಪಾಲಿಸಿಕೊಂಡು ಈ ಬಾರಿಯ ಕನ್ನಡ ರಾಜ್ಯೋತ್ಸವವನ್ನು ಜಿಲ್ಲೆಯಲ್ಲಿ ಸರಳ ಹಾಗೂ ಅರ್ಥಪೂರ್ಣವಾಗಿ ಆಚರಿಸ ಲಾಗುವುದು ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಇಂದು ಏರ್ಪಾಡಾಗಿದ್ದ ಕನ್ನಡ ರಾಜ್ಯೋತ್ಸವ ಆಚರಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈ ಬಾರಿಯ ಕನ್ನಡ ರಾಜ್ಯೋತ್ಸವ ಪ್ರತಿಬಾರಿಗಿಂತ ಭಿನ್ನವಾಗಿರಲಿದೆ. ಹೊರಾಂಗಣದಲ್ಲಿ ಏರ್ಪಡಿಸುವಂತಹ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕೋವಿಡ್ ನಿಯಂತ್ರಣಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನೇಕ ನಿಯಮಗಳನ್ನು ರೂಪಿಸಿ (3ನೇ ಪುಟಕ್ಕೆ)

## ಕೃಷಿ ಕಾನೂನುಗಳಿಗೆ ಸೆಡ್ಡು

**ಪ್ರತಿ ಮಸೂದೆಗಳಿಗೆ ಅಂಗೀಕಾರ ನೀಡಿದ ಪಂಜಾಬ್ ವಿಧಾನಸಭೆ**

**ಬೆಂಬಲ ಬೆಲೆಗಿಂತ ಕಡಿಮೆಗೆ ಇಳುವರಿ ಖರೀದಿಸಿದರೆ ಮೂರು ವರ್ಷ ಜೈಲು**

ಚಂಡೀಘಡ, ಅ. 20 – ಕೇಂದ್ರ ಸರ್ಕಾರದ ನೂತನ ಕೃಷಿ ಕಾನೂನುಗಳನ್ನು ತಳ್ಳಿ ಹಾಕುವ ನಿರ್ಣಯ ಹಾಗೂ ಅವುಗಳನ್ನು ನಿಷ್ಕ್ರಿಯಗೊಳಿಸುವ ನಾಲ್ಕು ಮಸೂದೆಗಳಿಗೆ ಪಂಜಾಬ್ ವಿಧಾನಸಭೆ ಅಂಗೀಕಾರ ನೀಡಿದೆ.

ಅಮರೀಂದರ್ ಸಿಂಗ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಕರೆದಿದ್ದ ವಿಶೇಷ ವಿಧಾನಸಭಾ ಅಧಿವೇಶನದ ಎರಡನೇ ದಿನ ಐದು ಗಂಟೆಗಳ ಕಾಲ ಚರ್ಚೆ ನಡೆಸಿದ ನಂತರ ಮಸೂದೆಗಳಿಗೆ ಸರ್ವಸಮ್ಮತಿಯಿಂದ (2ನೇ ಪುಟಕ್ಕೆ)

## ಎಸ್ಟಿ ಮೀಸಲಾತಿ ಪ್ರಮಾಣ ಹೆಚ್ಚಿಸುವಂತೆ ಒತ್ತಾಯಿಸಿ ಇಂದಿನಿಂದ ಶ್ರೀಗಳ ಧರಣಿ



ಕೇಂದ್ರದ ಮಾದರಿಯಲ್ಲಿ ರಾಜ್ಯದಲ್ಲೂ ಎಸ್ಟಿ ಜನಾಂಗಕ್ಕೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಪ್ರಮಾಣವನ್ನು ಶೇ.3 ರಿಂದ ಶೇ 7.5ಕ್ಕೆ ಹೆಚ್ಚಿಸುವಂತೆ ಒತ್ತಾಯಿಸಿ ರಾಜನಹಳ್ಳಿ ವಾಲ್ಮೀಕಿ ಗುರು ಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಇಂದಿನಿಂದ ಅನಿರ್ದಿಷ್ಟಾವಧಿಯ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಂಡಿದ್ದಾರೆ.


BELLAD Jeep MG

MG / FCA IS HIRING
SALES EXECUTIVES - FIELD
For Davangere and Surrounding area
Experienance -1 year experience, Salary : 13k pm+Incentives
Good communication, selling and negotiating skills.
Required to cover the locations assigned.
BELLAD GROUP OF COMPANIES
Contact: 9686718809 / 7760985888
Send CV's to: resumes@belladandcompany.com or
Visit our website : www.belladandcompany.com and apply


## ಸತ್ಯದ ದಾರಿಯಲ್ಲಿ ಸಾವಿರ ಸಂಕಷ್ಟ : ರಂಭಾಪುರಿ ಶ್ರೀ



ರಂಭಾಪುರಿ ಪೀಠ (ಬಾಳೆ ಹೊನ್ನೂರು), ಅ.20- ಒಳ್ಳೆಯ ಹೆಸರು, ಹಣಕ್ಕಿಂತಲೂ ಹೆಚ್ಚು ಬೆಲೆ ಬಾಳುವಂತಹುದು. ಸುಳ್ಳು ಹೇಳಲು ಹಲವು ದಾರಿ. ಆದರೆ, ಸತ್ಯ ಹೇಳಲು ಇರುವುದೊಂದೇ ದಾರಿ. ಸತ್ಯದ ದಾರಿಯಲ್ಲಿ ಬರುವ ಸಂಕಷ್ಟಗಳಿಗೆ ಅಂಜದೇ, ಅಳುಕದೇ ಧರ್ಮದ ಹೆದ್ದಾರಿಯಲ್ಲಿ ಸಾಗುವುದೊಂದೇ ನಮ್ಮ ಗುರಿಯಾಗಬೇಕು ಎಂದು ಶ್ರೀ ರಂಭಾಪುರಿ ಡಾ.ವೀರ ಸೋಮೇಶ್ವರ ಜಗದ್ಗುರುಗಳು ಎಂದು ಜಗದ್ಗುರುಗಳು ಹೇಳಿದರು.

ಶ್ರೀ ರಂಭಾಪುರಿ ಪೀಠದಲ್ಲಿ ಜರುಗುತ್ತಿರುವ 29ನೇ ಸಾಂಪ್ರದಾಯಿಕ ಸರಳ ಶರನ್ನವರಾತ್ರಿ ಆಚರಣೆಯ 4ನೇ ದಿನವಾದ ಇಂದಿನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.

ಮಾನವೀಯ ಸಂಬಂಧಗಳು ಗಟ್ಟಿಗೊಳ್ಳಲು ಹೃದಯ ಶ್ರೀಮಂತಿಕೆ ಬೇಕು. ಸುಖ, ಸಂತೋಷ, ಸೌಭಾಗ್ಯ ನಮಗಾಗಿ ಹೇಗೆ ಬಯಸುತ್ತೇವೆಯೋ, ಅದೇ ರೀತಿ ಇತರರಿಗಾಗಿ ಬಯಸುವುದು ನಿಜವಾದ ಧರ್ಮ. ವ್ಯರ್ಥ (2ನೇ ಪುಟಕ್ಕೆ)

## ಸ್ವಯಂ ಸೇವಕರನ್ನು ಕೊರೊನಾಗೆ ಗುರಿಪಡಿಸಿ ಪ್ರಯೋಗ

**ತ್ವರಿತ ಲಸಿಕೆಗೆ ಬ್ರಿಟನ್ ಸಿದ್ಧತೆ**

ಲಂಡನ್, ಅ. 20 – ಕೊರೊನಾ ವೈರಸ್ ಲಸಿಕೆಯ ಸಿದ್ಧತೆಯನ್ನು ತ್ವರಿತಗೊಳಿಸಲು ಮುಂದಾಗಿರುವ ಬ್ರಿಟನ್ ಸರ್ಕಾರ, 90 ಸ್ವಯಂ ಸೇವಕರನ್ನು ನಿರ್ಬಂಧಿತ ವಾತಾವರಣದಲ್ಲಿ ಸಣ್ಣ ಪ್ರಮಾಣದ ಕೊರೊನಾ ವೈರಸ್‌ಗೆ ಗುರಿಪಡಿಸಲು ನಿರ್ಧರಿಸಿದೆ.

ಕೊರೊನಾ ವೈರಸ್ ಲಸಿಕೆಗಾಗಿ ಬ್ರಿಟನ್ 33.6 ದಶಲಕ್ಷ ಪೌಂಡ್ ವೆಚ್ಚ ಮಾಡುತ್ತಿದೆ. ಪ್ರಯೋಗಕ್ಕೆ ಒಪ್ಪಿಗೆ ದೊರೆತರೆ, ಜನವರಿ ವೇಳೆಗೆ ಕ್ರಮ ತೆಗೆದುಕೊಳ್ಳಲಾಗುವುದು.

ಆರೋಗ್ಯವಂತ ವಯಸ್ಕ ಸ್ವಯಂ ಸೇವಕರನ್ನು (2ನೇ ಪುಟಕ್ಕೆ)

## ಕೊರೊನಾ ಅಧ್ಯಾಯ ಮುಗಿಯಿತು

**ಕೊರೊನಾ ಕಾರಣಕ್ಕಾಗಿ ಜಾಮೀನಿಲ್ಲ ಎಂದ ಹೈಕೋರ್ಟ್**

ನವದೆಹಲಿ, ಅ. 20 – ಕೊರೊನಾ ಅಧ್ಯಾಯ ಮುಗಿಯಿತು ಎಂದು ಹೇಳಿರುವ ದೆಹಲಿ ಹೈಕೋರ್ಟ್, ಸೋಂಕಿನ ಕಾರಣದಿಂದಾಗಿ ಸಾರಾಸಗಟಾಗಿ ಜಾಮೀನು ಹಾಗೂ ಪೆರೋಲ್ ನೀಡುವುದು ಅಂತ್ಯವಾಗಬೇಕಿದೆ ಎಂದು ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ಎನ್. ಪಟೇಲ್ ಅವರ ನೇತೃತ್ವದ ಪೀಠ ಸಾರಾಸಗಟಾಗಿ ಜಾಮೀನು ನೀಡುವುದರ ಕುರಿತು ವಿಚಾರಣೆ ನಡೆಸುವಾಗ, ಕೋವಿಡ್ ಅಧ್ಯಾಯ ಮುಗಿದಿದೆ. ಜಾಮೀನು ಹಾಗೂ ಪೆರೋಲ್ ಅವಧಿ ಅಂತ್ಯವಾಗಿದ್ದರೆ, ಅವರು ಒಂದೋ ಶರಣಾಗಬೇಕು, ಇಲ್ಲವೇ ಜೈಲಿಗೆ ಹೋಗಬೇಕು. ಕೊರೊನಾ ಹೊರತಾಗಿ ಬೇರೆ (2ನೇ ಪುಟಕ್ಕೆ)

## ಮಾಜಿ ಛೇರ್ಮನ್ ಹೊನ್ನೂರು ಟಿ. ಗಂಗಾಧರಪ್ಪ ನಿಧನ



ದಾವಣಗೆರೆ ತಾಲ್ಲೂಕು ಹೊನ್ನೂರು ಗ್ರಾಮದ ವಾಸಿ, ಟಿ. ವೀರಪ್ಪ ಇವರ ಜೇಷ್ಠ ಪುತ್ರರಾದ ಮಾಜಿ ಛೇರ್ಮನ್

**ಟಿ. ಗಂಗಾಧರಪ್ಪ**

ಇವರು ದಿನಾಂಕ 20-10-2020 ರಂದು ಮಂಗಳವಾರ ಮಧ್ಯಾಹ್ನ 2.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 78 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆ ಯು ದಿನಾಂಕ: 20-10-2020 ರಂದು ಮಂಗಳವಾರ ಸಂಜೆ ಹೊನ್ನೂರಿನ ಅವರ ಸ್ವಂತ ಜಮೀನಿನಲ್ಲಿ ನೆರವೇರಿತು.

ಇಂತಿ ದುಃಖ ತಪ್ತ ಕುಟುಂಬ ವರ್ಗ

**ಶ್ರೀಮತಿ ಪಾರ್ವತಮ್ಮ ಗಂಗಾಧರಪ್ಪ ಮತ್ತು ಮಕ್ಕಳು ಹೊನ್ನೂರು.**

## 50 ಸಾವಿರದ ಕೆಳಗಿಳಿದ ಸೋಂಕು

ನವದೆಹಲಿ, ಅ. 20 – ಮೂರು ತಿಂಗಳ ನಂತರ ಮೊದಲ ಬಾರಿಗೆ ದೇಶದಲ್ಲಿ ಒಂದೇ ದಿನದಲ್ಲಿ ಪತ್ತೆಯಾದ ಕೊರೊನಾ ಸೋಂಕಿತರ ಸಂಖ್ಯೆ 50 ಸಾವಿರಕ್ಕಿಂತ ಕಡಿಮೆ ಹಂತಕ್ಕೆ ಬಂದಿದೆ.

ಮಂಗಳವಾರದಂದು 46,790 ಜನರಲ್ಲಿ ಸೋಂಕಿರುವುದು ಕಂಡು ಬಂದಿದೆ. ಇದರೊಂದಿಗೆ ದೇಶದ ಒಟ್ಟು ಸೋಂಕಿತರ ಸಂಖ್ಯೆ 75.97 ಲಕ್ಷಕ್ಕೆ ತಲುಪಿದೆ. ಇದುವರೆಗೂ 1.15 ಲಕ್ಷ ಜನರು ಕೊರೊನಾದಿಂದ ಮೃತಪಟ್ಟಿದ್ದಾರೆ.

ಮಂಗಳವಾರ ಕೊರೊನಾದಿಂದ 587 ಜನರು ಮೃತಪಟ್ಟಿದ್ದು, ಸತತ ಎರಡನೇ ದಿನ ಕೊರೊನಾ (2ನೇ ಪುಟಕ್ಕೆ)

## ಕೈಲಾಸ ಶಿವಗಣಾರಾಧನೆ ಆಹ್ವಾನ



ಜನನ : 27.07.1948 ನಿಧನ : 17.10.2020

॥ ಶ್ರೀ ಜಡಗನಹಳ್ಳಿ ಬಸವೇಶ್ವರ ಪ್ರಸನ್ನ ॥

**ಶ್ರೀಮತಿ ಶಾಂತಮ್ಮ ಮತ್ತು ಮಕ್ಕಳು**

ಹಳೇಬಿಸಲೇರಿ, ದುರ್ಗಾಂಬಿಕಾ ಕ್ಯಾಂಪ್, ದಾವಣಗೆರೆ ತಾ॥ ಜಿಲ್ಲೆ.
ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 17.10.2020ನೇ ಶನಿವಾರ ರಾತ್ರಿ 12.30 ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಚಿಂದಿಗೌಡ್ರ ಕರೆಗೌಡಪ್ಪ**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 21.10.2020ನೇ ಬುಧವಾರ ಬೆಳಿಗ್ಗೆ 10.30 ಕ್ಕೆ ಹಳೇಬಿಸಲೇರಿ ಗ್ರಾಮದ ಶ್ರೀಮತಿ ಗೌರಮ್ಮ ವೀರಭದ್ರಪ್ಪ ಸಮುದಾಯ ಭವನದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖ ತಪ್ತರು, ✦ ಚಿಂದಿಗೌಡ್ರ ಕೊಟ್ರಪ್ಪ ಮತ್ತು ಸಹೋದರರು, ಸಹೋದರಿಯರು, ಮಾವಂದಿರು, ಮಕ್ಕಳು, ಮೊಮ್ಮಕ್ಕಳು
✦ ಶ್ರೀಮತಿ ಹಾಲಮ್ಮ, ಶ್ರೀ ಬಿ.ಕೆ. ಗಣೇಶ್ ✦ ಶ್ರೀಮತಿ ಚೈತ್ರಾ, ಶ್ರೀ ಬಿ.ಕೆ. ರುದ್ರೇಶ್
✦ ಶ್ರೀಮತಿ ಗೀತಮ್ಮ, ಶ್ರೀ ಬಿ.ಎಸ್. ತಿಪ್ಪೇಶಪ್ಪ, ನಾಗರಸನಹಳ್ಳಿ ✦ ಶ್ರೀಮತಿ ಮಂಗಳ, ಶ್ರೀ ಡಿ.ಹೆಚ್. ತಿಪ್ಪೇಶ್, ಬೆಸ್ಕಾಂ, ದಾವಣಗೆರೆ.
✦ ಚಂದ್ರನಗೌಡ್ರ ಚನ್ನೇಗೌಡ್ರು, ನದಿಹರಳಹಳ್ಳಿ ✦ ಓಂಕಾರಪ್ಪ ಎಸ್. ಉಪಾಧ್ಯಕ್ಷರು, ಮುರುಘರಾಜೇಂದ್ರ ಬ್ಯಾಂಕ್
✦ ರವಿ ಎನ್.ಎಸ್. ಗ್ರಾಮ ಪಂಚಾಯತ್ ಸದಸ್ಯರು, ಹದಡಿ ✦ ಚಿಂದೋಡಿ ಶಂಭುಲಿಂಗಪ್ಪ, ಕಲಾವಿದರು.
✦ ಶಂಕ್ಲೀಪುರದ ಚಿಂದಿಗೌಡ್ರ ವಂಶಸ್ಥರು, ಹಳೇಬಿಸಲೇರಿ ದುರ್ಗಾಂಬಿಕಾ ಕ್ಯಾಂಪ್ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.

ಇಂದ : ಶ್ರೀ ಬಿ.ಕೆ. ಗಣೇಶ್, ಶ್ರೀ ಅನ್ನಪೂರ್ಣೇಶ್ವರಿ ಹೋಟೆಲ್ ಎಂ.ಸಿ.ಸಿ.'ಬಿ' ಬ್ಲಾಕ್, ಸ್ವಿಮ್ಮಿಂಗ್ ಪೂಲ್ ಹಿಂಭಾಗ, ದಾವಣಗೆರೆ ಹಳೇಬಿಸಲೇರಿ ದುರ್ಗಾಂಬಿಕಾ ಕ್ಯಾಂಪ್, ದಾವಣಗೆರೆ ತಾ॥, ಜಿಲ್ಲೆ ಮೊ. : 8884746258, 9620655669




**ಸೈಟು ಮಾರಾಟಕ್ಕೆ**
(ರೂ. 999 ಅಡಿಯೊಂದಕ್ಕೆ)
ಬೈಪಾಸ್ ಶಾಮನೂರಿನ ಮುಂದೆ ಎಂ.ಬಿ. ಸಿಟಿಯಲ್ಲಿ 30x60, 40x70 30x65, 40x60, 80x88 ಇನ್ನೂ ಅನೇಕ.
ಬೂಸ್ನೂರ್ ಕಿರಣ್ (ಏಜೆಂಟ್)
97315-63409, 98440-63409
(ಬ್ಯಾಂಕ್ ಲೋನ್ ಆಗುತ್ತೆ, ರಿಜಿಸ್ಟರ್ ಆಗುವಂತಹ ಸೈಟುಗಳು)

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ, 20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ನಿಮ್ಮ ಮನೆಯಲ್ಲಿ ನೀರು ಸೋರುತ್ತಿದೆಯೇ ?**
ನಿಮ್ಮ ಮನೆಯಲ್ಲಿ ಸೀಲಿಂಗ್, ಬಾತ್ ರೂಂ, ಟ್ಯಾಂಕ್ ಮತ್ತು ಹೊರಗಡೆ ಗೋಡೆ ಸೀಳಿರುವುದಕ್ಕೆ ಮತ್ತು ಯಾವುದೇ ರೀತಿಯ ನೀರಿನ ಲೀಕೇಜ್‌ಗೆ ಕಡಿಮೆ ಖರ್ಚಿನಲ್ಲಿ ಪರ್ಮನೆಂಟ್ ಆಗಿ ಸರಿ ಮಾಡಿಕೊಡಲಾಗು ವುದು. ಗ್ಯಾರಂಟಿ ಇರುತ್ತದೆ. ನಿರಂತರವಾಗಿ 15 ವರ್ಷಗಳಿಂದ ಸೇವೆ.
ವಿಶ್ವಾಸಿ ಎಂಟರ್‌ಪ್ರೈಸಸ್ - 96065 57066

**ಮನೆ ಮಾರಾಟಕ್ಕೆ**
15x35 ಅಳತೆಯ RCC ಮನೆ ಶ್ರೀ ರೇಣುಕಾ ನಿಲಯ ವಸಂತ ರೋಡ್, ಓಲ್ಡ್ ಅಂಡರ್ ಬ್ರಿಡ್ಜ್ ಸರ್ಕಲ್ ಎದುರು ಮನೆ ಮಾರಾಟಕ್ಕಿದೆ.
ಸಂಪರ್ಕಿಸಿ:
97316 41241
80880 94954

**ಮನೆ ಬಾಡಿಗೆಗೆ ಇದೆ**
ಕೋರ್ಟ್ ಹಿಂಭಾಗದ ದೇವರಾಜ ಅರಸು ಬಡಾವಣೆ ಎ ಬ್ಲಾಕ್ 8ನೇ ಕ್ರಾಸ್ ನಲ್ಲಿ 2 ಬೆಡ್ ರೂಂ, ನೀರಿನ ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
ಮೊ.94481 14026

**ಮನೆ ಬಾಡಿಗೆಗೆ ಇವೆ**
ಪಿ. ಜೆ. ಬಡಾವಣೆ, 4ನೇ ಮುಖ್ಯ ರಸ್ತೆಯಲ್ಲಿ ಒಂದನೇ ಮಹಡಿಯಲ್ಲಿರುವ 2 ಮತ್ತು 3 ಬೆಡ್ ರೂಮ್ ಮನೆಗಳು ಬಾಡಿಗೆಗೆ ಸಿಗುತ್ತವೆ. (ರಿಲಾಯನ್ಸ್ ಫ್ರೆಶ್ ಹತ್ತಿರ)
ಸಂಪರ್ಕಿಸಿ : ಡಾ. ಎ.ಟಿ. ಪಾಟೀಲ್
98866 37265, 95353 67766

**ಬೇಕಾಗಿದ್ದಾರೆ**
ಜೆರಾಕ್ಸ್ ಅಂಗಡಿಯಲ್ಲಿ ಜೆರಾಕ್ಸ್ ಮಾಡಲು ಪುರುಷ ಮತ್ತು ಮಹಿಳೆಯರು ಹಾಗೂ ಕನ್ನಡ ಮತ್ತು ಇಂಗ್ಲಿಷ್ DTP ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ : 5000-6000 ಗಳು
ಕೆಲಸದ ಸಮಯ : ಬೆಳಿಗ್ಗೆ 10 ರಿಂದ ಸಂಜೆ 6
ಶ್ರೀ ತಿರುಮಲ ಜೆರಾಕ್ಸ್
R.T.O ಆಫೀಸ್ ಹತ್ತಿರ ಕೊಂಡಜ್ಜಿ ರೋಡ್, ದಾವಣಗೆರೆ.
81976 33555

**ಬೇಕಾಗಿದ್ದಾರೆ**
ದಾವಣಗೆರೆಯ ಪ್ರತಿಷ್ಠಿತ ನಮ್ಮ ಶರಭೇಶ್ವರ ಊಟದ ಹೋಟೆಲ್‌ನ ಕ್ಯಾಷ್ ಕೌಂಟರ್ ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನ ಇರುವ ಮಹಿಳೆಯರು ಬೇಕಾಗಿದ್ದಾರೆ. ಪರಸ್ಥಳದವರಿಗೆ
ಸಂಪರ್ಕಿಸಿ: ಬಸವರಾಜಯ್ಯ ಹಿರೇಮಠ
94489 80070 78991 90070

**ಮನೆ ಬಾಡಿಗೆಗೆ ಇದೆ**
'ಸುಮ್ಮನೆ' ಸಿಂಗಲ್ ಬೆಡ್ ರೂಂ, #1928/63A, 1ನೇ ಮಹಡಿ, ಎಸ್.ಎಸ್. ಲೇಔಟ್, ಎ ಬ್ಲಾಕ್, ಎಂ.ಬಿ.ಎ. ಕಾಲೇಜ್ ಹತ್ತಿರ, ಫಾರ್ಮಸಿ ಕಾಲೇಜ್ ಪಕ್ಕ, ದಾವಣಗೆರೆ.
ಫೋ. : 70227 94155

**ಸೈಟು ಮಾರಾಟಕ್ಕೆ ಇದೆ**
ಉತ್ತರ ಮುಖ ಅಳತೆ 15x52 ಶಾಂತಿನಗರ 1ನೇ ಮುಖ್ಯ ರಸ್ತೆ, ರಿಂಗ್ ರೋಡ್ ಸಮೀಪ ದಾವಣಗೆರೆ ವಿಶೇಷ ರಿಯಾಯಿತಿ ರಿಜಿಸ್ಟ್ರೇಷನ್ ಫ್ರೀ ಸಂಪರ್ಕಿಸಿ:
99643 78243
94483 39151

**ಮನೆ ಬಾಡಿಗೆಗೆ**
ದೇವರಾಜ ಅರಸ್ ಬಡಾವಣೆ 'ಎ' ಬ್ಲಾಕ್, ಹೊಸ ಕೋರ್ಟ್ ಹಿಂಭಾಗ 2 ಬೆಡ್ ರೂಂ 2 ಹಾಲ್ ಇರುವ ಮನೆ ಖಾಲಿ ಇದೆ ವಿಚಾರಿಸಿ.
9901247050

**ಮನೆ ಮಾರಾಟಕ್ಕೆ**
ಕುಂದುವಾಡ ಸಮೀಪದ KHB ಕಾಲೋನಿ (ತುಂಗಭದ್ರಾ ಬಡಾವಣೆ) 'ಎ' ಬ್ಲಾಕ್‌ನಲ್ಲಿ ಪೂರ್ವ ಮುಖದ 30×50 (# 307) ಅಳತೆಯ ಮನೆ ಮಾರಾಟಕ್ಕೆ ಇದೆ. ಆಸಕ್ತರು ಸಂಪರ್ಕಿಸಿ :
ಮೊ. : 97434 53481

**FOR RENT**
Building Suitable for Bank, Financial Institution or Offices in Ground Floor and First Floor. Available for rent at Banagara Pet, Harapanahalli. Contact:
96639-98197, 78928-13563

**ಪಾರ್ಕಿಂಗ್ ಜಾಗ ಬಾಡಿಗೆಗೆ ಬೇಕಾಗಿದೆ**
ಕಾರು ನಿಲ್ಲಿಸಲು ಕಾರ್ ಪಾರ್ಕಿಂಗ್ ಶೆಡ್ ಅಥವಾ ಖಾಲಿ ಜಾಗ ಸಿದ್ದವೀರಪ್ಪ ಬಡಾವಣೆ ಅಥವಾ ಸುತ್ತಮುತ್ತ ತಿಂಗಳ ಬಾಡಿಗೆ ಆಧಾರದ ಮೇಲೆ ಬೇಕಾಗಿದೆ. ಸಂಪರ್ಕಿಸಿ
98807 65680

**SHOPS FOR RENT**
(with wash room facility)
N.R.Road DAVANAGERE.
Contact:
94483 69523

**ಡಾ॥ ಮಹೇಶ್ ರಾಜಶೇಖರಯ್ಯ**
Hematologist ಇವರು
ದಿ. 21-10-2020ರ ಬುಧವಾರ ಬೆಳಿಗ್ಗೆ 10.00 ಗಂಟೆಯಿಂದ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**WANTED**
Office Boy-2, Receptionist-2 (Male/Female) with Basic Computer knowledge. contact with Bio-data.
Contact: Samyak Interior
76760 55550


**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**SWIGGY HIRING**
DELIVERY EXECUTIVES
FULL TIME / PART TIME
4000 TO 5000 WEEKLY SALARY
CONTACT :
95382 00008
95380 03302

**SSLC, PUC**
ಪಾಸ್/ಫೇಲ್ ಮುಂದೇನು?
ಡಿಪ್ಲೋಮಾ ಪೇಷೆಂಟ್ ಕೇರ್ ನರ್ಸಿಂಗ್ 6 ತಿಂಗಳ ಟ್ರೈನಿಂಗ್ ನಂತರ ನರ್ಸ್ ಕೆಲಸ.
ನೇರ ಪರೀಕ್ಷೆಗಳು : NTC, SSLC, PUC
ಗಂಗೋತ್ರಿ ಕಮ್ಯುನಿಟಿ ಕಾಲೇಜ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಫೋ. : 86602 35013

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ, ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 20.10.2020ರ ಮಂಗಳವಾರ ಸಂಜೆ 5.30ಕ್ಕೆ ನಿಧನರಾದ ನಮ್ಮ ಅಂಗಡಿಯ ಕೆಲಸಗಾರ


**ಸೋಮಶೇಖರ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಇಂತಿ ದುಃಖತಪ್ತರು: ಷಾ ಕಾಳೂರಾಮ್ ದಿಲೀಪ್‌ಕುಮಾರ್

॥ ಶ್ರೀ ಶೈಲ ಮಲ್ಲಿಕಾರ್ಜುನಸ್ವಾಮಿ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**



ಜನನ : 28-11-1954 ನಿಧನ : 18-10-2020

ದಾವಣಗೆರೆ ತಾ॥ ಜಿ॥ ತುರ್ಚಘಟ್ಟ ಗ್ರಾಮದ ವಾಸಿ, ಮೂಲೇರ ದಿ॥ ಶ್ರೀ ಕರಿಬಸಪ್ಪ ಇವರ ಮಗನಾದ ಶ್ರೀಮತಿ, ಶ್ರೀ ಎಂ.ಕೆ. ಗುರುಪಾದಪ್ಪ ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 18.10.2020ನೇ ಭಾನುವಾರ ಬೆಳಿಗ್ಗೆ 6.15ಕ್ಕೆ ನಮ್ಮ ಪೂಜ್ಯ ಅಣ್ಣನವರಾದ

**ಶರಣ ಶ್ರೀ ಎಂ.ಕೆ. ಸುಭಾಶ್‌ಚಂದ್ರಪ್ಪ**

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆ**ಯನ್ನು **ದಿನಾಂಕ 22.10.2020ನೇ ಗುರುವಾರ ಬೆಳಿಗ್ಗೆ 10.30ಕ್ಕೆ ತುರ್ಚಘಟ್ಟ ಗ್ರಾಮದ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಶೃತಿ, ಶ್ರೀ ಎಂ.ಎಸ್. ಪ್ರಸನ್ನಕುಮಾರ ಮತ್ತು ಅಣ್ಣ ತಮ್ಮಂದಿರು, ಮಕ್ಕಳು.
ಶ್ರೀಮತಿ ಪಾರಿಜಾತಮ್ಮ, ಶ್ರೀ ಎಂ.ಕೆ. ಗುರುಪಾದಪ್ಪ ಮತ್ತು ಮಕ್ಕಳು,
ಮಾವಂದಿರು ಮತ್ತು ಅಳಿಯಂದಿರು, ಮಕ್ಕಳು, ಮೊಮ್ಮಕ್ಕಳು.
ಮೂಲೇರ ವಂಶಸ್ಥರು, ಶಿಡಕಪ್ಪರ ಬಂಧುಗಳು ಹಾಗೂ ತುರ್ಚಘಟ್ಟ ಗ್ರಾಮಸ್ಥರು ಹಾಗೂ ಬಂಧು-ಮಿತ್ರರು. ಮೊ. : 99861 71144

# ಕೃಷಿ ಕಾನೂನುಗಳಿಗೆ ಸೆಡ್ಡು

**(1ನೇ ಪುಟದಿಂದ)** ಅಂಗೀಕಾರ ನೀಡಲಾಗಿದೆ.

ಪ್ರತಿಪಕ್ಷಗಳಾದ ಶಿರೋಮಣಿ ಅಕಾಲಿ ದಳ, ಆಮ್ ಆದ್ಮಿ ಪಾರ್ಟಿ ಹಾಗೂ ಲೋಕ ಇನ್ಸಾಫ್ ಸದಸ್ಯರು ಮಸೂದೆಗಳು ಹಾಗೂ ನಿರ್ಣಯಗಳಿಗೆ ಬೆಂಬಲಿಸಿದ್ದಾರೆ. ಬಿಜೆಪಿಯ ಇಬ್ಬರು ಸದಸ್ಯರು ಸದನದಲ್ಲಿ ಉಪಸ್ಥಿತರಿರಲಿಲ್ಲ.

ಕನಿಷ್ಠ ಬೆಂಬಲ ಬೆಲೆಗಿಂತ ಗೋಧಿ ಇಲ್ಲವೇ ಅಕ್ಕಿಯನ್ನು ಖರೀದಿಸುವ ಇಲ್ಲವೇ ಮಾರಾಟ ಮಾಡುವವರಿಗೆ ಮೂರು ವರ್ಷಗಳಿಗೂ ಹೆಚ್ಚಿನ ಶಿಕ್ಷೆ ವಿಧಿಸುವ ಅಂಶ ಮಸೂದೆಗಳಲ್ಲಿದೆ. ರೈತರ 2.5 ಎಕರೆಗಿಂತ ಕಡಿಮೆ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳುವಂತಿಲ್ಲ. ಇದರ ಜೊತೆಗೆ ಕಾಳಸಂತೆ ತಡೆಯುವ ಅಂಶಗಳೂ ಇದರಲ್ಲಿವೆ.

ಕೇಂದ್ರ ಸರ್ಕಾರದ ಕಾಯ್ದೆಗಳನ್ನು ನಿಷ್ಕ್ರಿಯಗೊಳಿಸುವ ಶಾಸನಗಳನ್ನು ಜಾರಿಗೆ ತರಲು ಕಾಂಗ್ರೆಸ್ ತನ್ನ ಆಡಳಿತದ ರಾಜ್ಯಗಳಿಗೆ ತಿಳಿಸಿತ್ತು. ಅದರಂತೆ ಪಂಜಾಬ್ ಸರ್ಕಾರ ಕ್ರಮ ತೆಗೆದುಕೊಂಡಿದೆ. ಆದರೆ, ಈ ಮಸೂದೆಗಳು ಕಾಯ್ದೆಗಳಾಗಲು ರಾಜ್ಯಪಾಲರ ಅಂಗೀಕಾರ ಬೇಕಾಗಿದೆ. ರಾಜ್ಯಪಾಲರು ಇವುಗಳಿಗೆ ಅಂಗೀಕಾರ ನೀಡಬಹುದು ಇಲ್ಲವೇ ಅವುಗಳನ್ನು ರಾಷ್ಟ್ರಪತಿ ಪರಾಮರ್ಶೆಗೆ ವಹಿಸಬಹುದು.

ವಿಧಾನಸಭಾ ಕಲಾಪದ ನಂತರ ಮುಖ್ಯಮಂತ್ರಿ ಅಮರೀಂದರ್ ಸಿಂಗ್ ಅವರು ರಾಜಭವನಕ್ಕೆ ತೆರಳಿ ರಾಜ್ಯಪಾಲ ವಿ.ಪಿ. ಸಿಂಗ್ ಬಡ್ನೋರೆ ಅವರನ್ನು ಭೇಟಿ ಮಾಡಿದರು.

# 50 ಸಾವಿರದ ಕೆಳಗಿಳಿದ ಸೋಂಕು

**(1ನೇ ಪುಟದಿಂದ)** ದಿಂದ ಸಾವನ್ನಪ್ಪಿದವರ ಸಂಖ್ಯೆ 600ಕ್ಕಿಂತ ಕಡಿಮೆ ಇದೆ. ದೇಶದಲ್ಲಿ ಇದುವರೆಗೆ ಒಟ್ಟು 67 ಲಕ್ಷ ಜನರು ಕೊರೊನಾದಿಂದ ಚೇತರಿಸಿಕೊಂಡಿದ್ದಾರೆ. ಸಕ್ರಿಯ ಸೋಂಕಿತರ ಸಂಖ್ಯೆ ನಾಲ್ಕನೇ ದಿನವೂ 8 ಲಕ್ಷಕ್ಕಿಂತ ಕಡಿಮೆ ಹಂತದಲ್ಲಿ ಮುಂದುವರೆದಿದೆ. ದೇಶದಲ್ಲೀಗ 7.48 ಲಕ್ಷ ಜನ ಸಕ್ರಿಯ ಸೋಂಕಿತರಿದ್ದಾರೆ. ಇದು ಒಟ್ಟು ಸೋಂಕಿತರ ಶೇ.9.85ರಷ್ಟಾಗಿದೆ.

ಮಹಾರಾಷ್ಟ್ರದಲ್ಲಿ ಒಂದೇ ದಿನ ಅತಿ ಹೆಚ್ಚಿನ 15 ಸಾವಿರ ಸೋಂಕಿತರು ಪತ್ತೆಯಾಗಿದ್ದಾರೆ. ನಂತರದ ಸ್ಥಾನದಲ್ಲಿರುವ ಕರ್ನಾಟಕದಲ್ಲಿ ಎಂಟು ಸಾವಿರ ಸೋಂಕಿತರು ಕಂಡು ಬಂದಿದ್ದಾರೆ.


**ಬೇಕಾಗಿದ್ದಾರೆ**
ಬೇಕರಿ ಅಂಗಡಿಯಲ್ಲಿ ಕೌಂಟರ್ ಕೆಲಸಕ್ಕೆ ಹುಡುಗ - ಹುಡುಗಿಯರು ಬೇಕಾಗಿದ್ದಾರೆ. ಚಾಟ್ಸ್ ಮಾಸ್ಟರ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. 98451-54400

**ಮನೆ ಬಾಡಿಗೆ**
1 BHK, ಬೋರ್ ವೆಲ್ / ಮುನಿಸಿಪಲ್ ನೀರಿನ ಸೌಲಭ್ಯವಿದೆ. #3791, ಪದ್ಮ ಕುಟೀರ, ಶಂಕರ್‌ಲೀಲಾ ಕಲ್ಯಾಣ ಮಂಟಪ ರಸ್ತೆ, ದಿವ್ಯ ಯೋಗ ಮಂದಿರ ಹಿಂಭಾಗ, ಎಂ.ಸಿ.ಸಿ.'ಬಿ' ಬ್ಲಾಕ್ (ಸಸ್ಯಹಾರಿಗೆ ಮಾತ್ರ)
96636 88803

**ಸೂಪರ್ ಗ್ರೋಸರೀಸ್**
Super Groceries
ದಿನ ಬಳಕೆಯ ಎಲ್ಲಾ ವಸ್ತುಗಳು ಒಂದೇ ಫೋನ್ ಕಾಲ್‌ನಲ್ಲಿ ಲಭ್ಯ. ಮಾರುಕಟ್ಟೆ ದರದಲ್ಲಿ ಕನಿಷ್ಠ ಆರ್ಡರ್ ರೂ 1000/- ಲಭ್ಯ.
ಹೋಂ ಡೆಲಿವರಿ ಶುದ್ಧ ಗಾಣದ ಕೊಬ್ಬರಿ ಎಣ್ಣೆ ದೊರೆಯುತ್ತದೆ.
84310 19113, 74112 50338


# ಕೊರೊನಾ ಅಧ್ಯಾಯ ಮುಗಿಯಿತು

**(1ನೇ ಪುಟದಿಂದ)** ಕಾರಣಗಳಿಗೆ ಜಾಮೀನು ವಿಸ್ತರಣೆ ಹಾಗೂ ಪೆರೋಲ್ ನೀಡುವುದನ್ನು ಪರಿಗಣಿಸಬಹುದಾಗಿದೆ ಎಂದು ತಿಳಿಸಿದೆ.

ಕೊರೊನಾ ಹಿನ್ನೆಲೆಯಲ್ಲಿ ನಾವು ಪೆರೋಲ್ ಹಾಗೂ ಜಾಮೀನಿಗೆ ಆದೇಶ ನೀಡಿದ್ದೆವು. ಜೈಲಿನಲ್ಲಿ ಹೆಚ್ಚು ಜನರಿದ್ದಾರೆಯೇ ಎಂಬುದು ನಮ್ಮ ಆದೇಶಕ್ಕೆ ಸಂಬಂಧಿಸಿದ್ದಲ್ಲ. ಅಪರಾಧ ಯಾವ ಸ್ವರೂಪದ್ದು ಎಂಬುದೂ ನಮಗೆ ಸಂಬಂಧಿಸಿಲ್ಲ ಎಂದು ಪೀಠ ತಿಳಿಸಿದೆ.


**WANTED**
Salesman/Sales Girls
Assistant Salesman
ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**ಸಂಘ-ಸಂಸ್ಥೆಗಳ NGO-ಟ್ರಸ್ಟ್‌ಗಳ ನೋಂದಣಿ ನವೀಕರಣ ಮಾಡಿಕೊಡುತ್ತೇವೆ.**
94838 62779

**WANTED**
ACCOUNTANT.
SALES EXECUTIVES
(Male candidates)
BACKEND OFFICERS
(Female) ANY DEGREE
CONTACT :
95382 00008, 99866 92789

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ
ವಧು-ವರರ ಕೇಂದ್ರ
Vidya Nagara, Nutan College Road, Davangere.
Web.: www.bhoomikamatrimony.com
7760316576, 9008055813

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481-59303, 80509 52637

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

Earn up to 20000+ (Basic) Bonus+Incentive)
**WALK-IN-INTERVIEW**
Urgent required
* Relationship Associates (M/F)
* Tele Executives(F) * Data Executive (M)
Education : Min, 10+2 & Above Age Criteria:18.30 years
Fresher's Welcome, Criteria : Young, Energetic, Fluency in Local Language.
Walk In Tnterview with Detailed CV & Recent Photo on October 20-21 2020 at : 11.am to 4 pm
MANJRAK MARKETING LLP
(Corporate Agent of Exide Life Insurance), # 307/102,2nd floor, Murthyappa Complex, Hadadi Road, Davangere-02.
Cell : 08192 232317
96324 56847, 9008091444

**FOR INTERIOR WORKS**
INTERIOR DESIGNING & DECORATIONS, LANDSCAPE DESIGNING, 3D DESIGNING, BUNGLOWS, HOUSES, COMMERCIAL, SCHOOLS, COLLEGE, HOTELS & RESTAURANT
CONTACT:
ANAND GONDKAR , PUNE
C/o.Latest Garments DAVANGERE
PH: 94206 96310


**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**

॥ ಶ್ರೀ ಮರುಳಸಿದ್ದೇಶ್ವರ ಪ್ರಸನ್ನ ॥



ದಾವಣಗೆರೆ ಸಿಟಿ ಆನೆಕೊಂಡದ ವಾಸಿ
**ಶ್ರೀಮತಿ ವಿಶಾಲಮ್ಮ ಪಾಟೀಲ್ ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 16-10-2020ನೇ ಶುಕ್ರವಾರ ರಾತ್ರಿ 8 ಕ್ಕೆ ನನ್ನ ಪೂಜ್ಯ ಪತಿಯವರಾದ

**ಶ್ರೀ ಜಿ.ಎನ್. ನಾಗರಾಜ್ ಪಾಟೀಲ್**

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಶಿವಗಣಾರಾಧನೆ'ಯನ್ನು ದಿನಾಂಕ 21-10-2020 ನೇ ಬುಧವಾರ ಬೆಳಿಗ್ಗೆ 10.05 ಕ್ಕೆ ದಾವಣಗೆರೆ ಡಿಸಿಎಂ ಟೌನ್‌ಶಿಪ್, 3ನೇ ಮೇನ್, 5ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ವಿಶಾಲಮ್ಮ ಪಾಟೀಲ್ ಮತ್ತು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಗೌಡ್ರ ವಂಶಸ್ಥರು, ಆನೆಕೊಂಡ ಮತ್ತು ಬಂಧು-ಮಿತ್ರರು. ಮೊ. : 81059 62812, 90366 69980

# ಕೊರೊನಾ ನಿರ್ಲಕ್ಷ್ಯ ಸಲ್ಲದು : ನ್ಯಾ.ತಿಮ್ಮಯ್ಯ



ಜಗಳೂರು

ಜಗಳೂರು, ಅ.20- ಕೊರೊನಾ ಬಗ್ಗೆ ನಿರ್ಲಕ್ಷ್ಯ ಸಲ್ಲದು. ಪ್ರತಿ ಮನೆ ಮನೆಗೂ ಜಾಗೃತಿ ಮೂಡಿಸುವ ಕೆಲಸ ಮಾಡಬೇಕಿದೆ. ಕಡ್ಡಾಯವಾಗಿ ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಪಾಡುವ ಮೂಲಕ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಎಂದು ಸಿವಿಲ್ ಪ್ರಥಮ ದರ್ಜೆ ನ್ಯಾಯಾಲಯದ ನ್ಯಾಯಾಧೀಶರಾದ ಜಿ. ತಿಮ್ಮಯ್ಯ ಹೇಳಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ಕೊರೊನಾ ಜಾಗೃತಿ ಜಾಥಾ ವಾಹನಕ್ಕೆ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಸಮಾಜದಲ್ಲಿ ಪ್ರತಿಯೊಬ್ಬ ನಾಗರಿಕರೂ ಸಹ ವಾರಿಯರ್ಸ್‌ಗಳಾಗಿ ಕೊರೊನಾ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ತಮ್ಮ ಮೂಲಭೂತ ಕರ್ತವ್ಯವನ್ನು ಮೆರೆಯಬೇಕು ಎಂದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಹೆಚ್. ನಾಗರಾಜ್ ಮಾತನಾಡಿ, ತಾಲ್ಲೂಕಿನಲ್ಲಿ ಇದುವರೆಗೂ 1500 ಸಕ್ರಿಯ ಕೊರೊನಾ ಕೇಸ್‌ಗಳಿದ್ದು, ಅದರಲ್ಲಿ 1000 ಕ್ಕೂ ಹೆಚ್ಚು ಗುಣಮುಖರಾಗಿದ್ದು, ಈವರೆಗೆ 15 ಜನರು ಮೃತಪಟ್ಟಿದ್ದಾರೆ. ಗ್ರಾಮೀಣ ಭಾಗದಲ್ಲಿ ಇನ್ನು ಜಾಗೃತಿ ಅಗತ್ಯವಿದೆ ಎಂದರು.

ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಾನಾಯ್ಕ ಮಾತನಾಡಿ, ಮಾಸ್ಕ್ ಧರಿಸದಿದ್ದರೆ ದಂಡ ಖಚಿತ. ಆದರೆ ದಂಡವೇ ಪರಿಹಾರವಲ್ಲ, ಪ್ರತಿಯೊಬ್ಬರು ತಮ್ಮ ಜವಾಬ್ದಾರಿ ಅರಿತು ಕೊರೊನಾ ಸಂಕಷ್ಟವನ್ನು ದೂರ ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ವಕೀಲ ಸಂಘದ ಅಧ್ಯಕ್ಷ ಎಚ್. ಬಸವರಾಜಪ್ಪ, ಮಾಜಿ ಅಧ್ಯಕ್ಷ ಬಸವರಾಜಪ್ಪ. ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಉಮೇಶ್ ಬಾಬು, ಮೇಲ್ವಿಚಾರಕಿ ಶಶಿಕಲಾ ಶಾಂತಮ್ಮ ಸೇರಿದಂತೆ ವಕೀಲರ ಸಂಘದ ಕಾರ್ಯದರ್ಶಿ ತಿಪ್ಪೇಸ್ವಾಮಿ ಮತ್ತು ವಕೀಲರಾದ ಶ್ರೀನಿವಾಸ್, ಓಬಳೇಶ್, ಆರ್. ಲಕ್ಷ್ಮಣ್, ಕರಿಬಸಯ್ಯ, ಮಲ್ಲಿಕಾರ್ಜುನಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಸತ್ಯದ ದಾರಿಯಲ್ಲಿ ಸಾವಿರ ಸಂಕಷ್ಟ : ರಂಭಾಪುರಿ ಶ್ರೀ

**(1ನೇ ಪುಟದಿಂದ)** ಕಾಲಹರಣ ಮಾಡುವವರಿಗೆ ಜೀವನದ ಮೌಲ್ಯ ಅರ್ಥವಾಗುವುದಿಲ್ಲ. ಮುಳ್ಳು ಗಳ ನಡುವೆ ಗುಲಾಬಿ ಅರಳಿ ಸುಗಂಧ ಪರಿಮಳ ಬೀರುವಂತೆ ಕಷ್ಟಗಳ ನಡುವೆ ಬಾಳಿ ಬದುಕಿದರೂ ಮೂಲ ಆದರ್ಶಗಳನ್ನು ಎಂದಿಗೂ ಮರೆಯಬಾರದು. ಕೈಲಾಸಕ್ಕಿಂತ ಕಾಯಕ, ಧರ್ಮಕ್ಕಿಂತ ದಯಾಗುಣ, ಅರಿವಿಗಿಂತ ಆಚಾರ, ಅಧಿಕಾರ, ಅಂತಸ್ತುಗಳಿಗಿಂತ ಅಭಿಮಾನ, ಭೌತಿಕ ಆಸ್ತಿಗಿಂತ ಆರೋಗ್ಯ, ಮಾನ ಸನ್ಮಾನಕ್ಕಿಂತ ಸಂಸ್ಕಾರ, ಸಂಸ್ಕೃತಿ ಮುಖ್ಯವೆಂದು ಶ್ರೀ ಜಗದ್ಗುರು ರೇಣುಕಾ ಚಾರ್ಯರು ಸಿದ್ಧಾಂತ ಶಿಖಾಮಣಿ ಗ್ರಂಥದಲ್ಲಿ ಸ್ಪಷ್ಟವಾಗಿ ನಿರೂಪಿಸಿದ್ದನ್ನು ಮರೆಯುವಂತಿಲ್ಲ. ಚತುರ್ವಿಧ ಪುರುಷಾರ್ಥಗಳಲ್ಲಿ ಒಂದನ್ನಾದರೂ ಸಾಧಿಸದಿದ್ದರೆ ಮಾನವ ಜೀವನ ವ್ಯರ್ಥವಾಗುತ್ತದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಬೆಳೆಸಿದರಷ್ಟೇ ಸಾಲದು. ಅದರ ಜೊತೆಗೆ ಮಾನವೀಯತೆಯ ಆದರ್ಶ ಮೌಲ್ಯಗಳನ್ನು ಎತ್ತಿ ಹಿಡಿಯುವ ಅವಶ್ಯಕತೆ ಇದೆ ಎಂದು ಶ್ರೀಗಳು ಹೇಳಿದರು.

ಶರನ್ನವರಾತ್ರಿಯ 4ನೇ ದಿನ ಕುಷ್ಮಾಂಡಾ ಸ್ವರೂಪದಲ್ಲಿ ಜಗನ್ಮಾತೆ ದೇವಿಯನ್ನು ಪೂಜಿಸಿ ಕೃತಾರ್ಥರಾಗುತ್ತಾರೆ. ಅಷ್ಟ ಭುಜಗಳಿಂದ ಶೋಭಿತಳಾದ ಕೂಷ್ಮಾಂಡಾ ದೇವಿಯನ್ನು ಪೂಜಿಸುವುದರಿಂದ ಸಿದ್ಧಿ ಮತ್ತು ಸಂಪತ್ತು ಕರುಣಿಸುತ್ತಾಳೆ ಎಂಬ ನಂಬಿಕೆ ಇದೆ ಎಂದರು.

ಸುಳ್ಳ ಪಂಚಗೃಹ ಹಿರೇಮಠದ ಶ್ರೀ ಶಿವಸಿದ್ಧರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ವೀರಶೈವ ಧರ್ಮದಲ್ಲಿ ಶಿವಶಕ್ತಿಯನ್ನು ಸಂಯುಕ್ತವಾಗಿ ಪೂಜಿಸುತ್ತಾ ಬಂದಿದ್ದಾರೆ. ಬ್ರಹ್ಮ, ವಿಷ್ಣು ಸಹ ಜಿಹ್ವೆ ಮತ್ತು ವೃಕ್ಷಸ್ಥಲದಲ್ಲಿ ಶಕ್ತಿಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಆದರೆ ಶಿವ ತನ್ನ ಅರ್ಧ ಶರೀರವನ್ನೇ ಪಾರ್ವತಿಗೆ ಕೊಟ್ಟಿದ್ದನ್ನು ಕಾಣುತ್ತೇವೆ ಎಂದರು.

ಶಿರಕೋಳ ಹಿರೇಮಠದ ಶ್ರೀ ಗುರುಸಿದ್ಧೇಶ್ವರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಸಂಸ್ಕಾರ, ಸಂಸ್ಕೃತಿ ಕೊಡುವ ನಿಟ್ಟಿನಲ್ಲಿ ವೀರಶೈವ ಪೀಠ, ಮಠಗಳು ಮುಂಚೂಣಿಯಲ್ಲಿವೆ. ಶರನ್ನವರಾತ್ರಿ ಸಂದರ್ಭದಲ್ಲಿ ಆದಿಶಕ್ತಿ ದೇವಿಯನ್ನು ಪೂಜಿಸಿ, ತಮ್ಮೆಲ್ಲ ಸಂಕಷ್ಟಗಳನ್ನು ಪರಿಹಾರ ಮಾಡಿಕೊಳ್ಳುತ್ತಾರೆ ಎಂದರು.

ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸಿದ್ದರು. ಮಳಲಿ ಸಂಸ್ಥಾನ ಮಠದ ಡಾ. ನಾಗಭೂಷಣ ಶಿವಾಚಾರ್ಯ ಸ್ವಾಮೀಜಿ, ಸಿದ್ಧರಬೆಟ್ಟ ಕ್ಷೇತ್ರದ ಶ್ರೀ ವೀರಭದ್ರ ಶಿವಾಚಾರ್ಯ ಸ್ವಾಮೀಜಿ, ಸಂಗೊಳ್ಳಿ ಹಿರೇಮಠದ ಗುರುಲಿಂಗ ಶಿವಾಚಾರ್ಯ ಸ್ವಾಮೀಜಿ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಬಾಳೆಹೊನ್ನೂರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸತೀಶ್ ಅವರು 2021ನೇ ಇಸ್ವಿ ಪುಣ್ಯಕೋಟಿ ನಾಮಾಂಕಿತ ಪಾಕೆಟ್ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಚಿಕ್ಕಮಗಳೂರು ಡಿ.ಎಫ್.ಓ. ಶರಣಬಸಪ್ಪ, ಲೋಕಾಪುರದ ಸುರೇಶ್ವರಸ್ವಾಮಿ ಹಿರೇಮಠ, ಮಾಜಿ ಶಾಸಕ ಹೆಚ್.ಎಂ.ಚಂದ್ರಶೇಖರಪ್ಪ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಶ್ರೀಮತಿ ಕಮಲಾ ಸುರೇಶ್ವರ ಸ್ವಾಮಿ ಹಿರೇಮಠ ಲೋಕಾಪುರ ಇವರಿಂದ ಭಕ್ತಿಗೀತೆ ಜರುಗಿತು. ಶಿಕ್ಷಕ ವೀರೇಶ್ ಕುಲಕರ್ಣಿ ಸ್ವಾಗತಿಸಿದರು. ಶಿವಮೊಗ್ಗದ ಶಾಂತಾ ಆನಂದ್ ನಿರೂಪಿಸಿದರು.

## ನಗರದಲ್ಲಿ ಇಂದು ಪೊಲೀಸ್ ಹುತಾತ್ಮರ ದಿನಾಚರಣೆ

ಜಿಲ್ಲಾ ಪೊಲೀಸ್ ಕವಾಯಿತು ಮೈದಾನದಲ್ಲಿ ಇಂದು ಪೊಲೀಸ್ ಹುತಾತ್ಮರ ದಿನಾಚರಣೆ ಆಚರಿಸಲಾಗುವುದು. ಬೆಳಿಗ್ಗೆ 8 ಗಂಟೆಗೆ ನಡೆಯುವ ಸಮಾರಂಭದ ಅಧ್ಯಕ್ಷತೆಯನ್ನು ಪೂರ್ವ ವಲಯದ ಪೊಲೀಸ್ ಮಹಾ ನಿರೀಕ್ಷಕ ರವಿ ಎಸ್. ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ಕೆ.ಜಿ. ಗೀತಾ ಆಗಮಿಸುವರು.

## ಎಂ.ಪಿ.ಕರಬಸಪ್ಪ ಪಕ್ಷೇತರ

ದಾವಣಗೆರೆ, ಅ. 20- ಆಗ್ನೇಯ ಪದವೀಧರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ತಾವು ಸ್ಪರ್ಧಿಸಿರುವುದಾಗಿ ಎಂ.ಪಿ. ಕರಬಸಪ್ಪ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

# ಮಹಿಳೆಯರಿಗೆ ಜೀವಂತ ದುರ್ಗಾ ಪೂಜೆ



ನಂದಿತಾವರೆ

ಮಲೇಬೆನ್ನೂರು, ಅ.19- ಬಡವರು, ದೀನರು, ದರಿದ್ರರ ಸೇವೆಯಲ್ಲಿ ದೇವರನ್ನು ಕಾಣಬೇಕು ಎಂದು ಹರಿಹರದ ರಾಮಕೃಷ್ಣ ವಿವೇಕಾನಂದ ಆಶ್ರಮದ ಶ್ರೀ ಸ್ವಾಮಿ ಶಾರದೇಶಾನಂದ ಮಹಾರಾಜ್ ಹೇಳಿದರು.

ಇಲ್ಲಿನ ತಾಂಡಾದಲ್ಲಿ ನವರಾತ್ರಿಯ 2ನೇ ದಿನ 55 ಬಡ ಮಹಿಳೆಯರಿಗೆ ಬೆಲ್ಲ, ಬೇಳೆ, ಸೀರೆಯನ್ನು ನೀಡಿ, ಜೀವಂತ ದುರ್ಗೆಯರಿಗೆ ಪೂಜೆ ಸಲ್ಲಿಸಿ, ಶ್ರೀಗಳು ಆಶೀರ್ವಚನ ನೀಡಿದರು.

ಜೀವನದಲ್ಲಿ ಶಿವ ಹಾಗೂ ಬಡವರಲ್ಲಿ ದೇವರನ್ನು ಕಾಣಬೇಕು. ಹಾಗೆಯೇ ಆ ಪೂಜೆ ಮೂಲಕ ಶಾರದಾಮಾತೆಯನ್ನು ಕಂಡಂತಾಗುತ್ತದೆ ಎಂದರು. ಬಡವರು ಬಡವರಾಗಿ ಬದುಕಬೇಡಿ. ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಿ. ಅವರು ಶಿಕ್ಷಣವಂತರಾದರೆ ನಿಮ್ಮ ಬದುಕು ಬದಲಾಗುತ್ತದೆ ಎಂದು ಸ್ವಾಮೀಜಿ ಹೇಳಿದರು.

ಶ್ರೀ ಸ್ವಾಮಿ ಕರು ಣಾನಂದಜೀ, ದಾನಿಗಳಾದ ಸುಜಾತ ವಿಜಯಾ ನಂದ, ಪ್ರೇಮಾ ಗೋಪಾಲಕೃಷ್ಣ, ಶ್ರೀಧರ್ ಭೂತೆ, ಹರೀಶ್ ಮತ್ತಿತರರು ಈ ವೇಳೆ ಹಾಜರಿದ್ದರು.

## ಗುರಿಪಡಿಸಿ ಪ್ರಯೋಗ

**(1ನೇ ಪುಟದಿಂದ)** ಕೊರೊನಾ ವೈರಸ್‌ಗೆ ನಿಯಂತ್ರಿತ ವಾತಾವರಣದಲ್ಲಿ ಗುರಿಪಡಿಸುವ ಮೂಲಕ ವೈರಸ್ ಚಟುವಟಿಕೆಯನ್ನು ನಿರಂತರ ಅಧ್ಯಯನಕ್ಕೆ ಒಳಪಡಿಸಲು ಉದ್ದೇಶಿಸಲಾಗಿದೆ. ಕೊರೊನಾ ಸೋಂಕು ಬರಲು ಎಷ್ಟು ಕಡಿಮೆ ಸಂಖ್ಯೆಯ ವೈರಸ್‌ಗಳಿದ್ದರೆ ಸಾಕು ಎಂಬುದು ಪ್ರಯೋಗದಿಂದ ತಿಳಿದು ಬರಲಿದೆ.

## ನವದುರ್ಗೆಯರು

ನಮೋ ನಮೋ ದೇವಿ
ನಮೋ ನಾಡದೇವಿ
ನವರಾತ್ರಿಯಂದು
ನವದುರ್ಗೆಯರನ್ನು
ಪೂಜಿಸಿ ಆರಾಧಿಸುವೆನಮ್ಮ

ಶೈಲಪುತ್ರಿ ಬ್ರಹ್ಮಚಾರಿಣಿ
ಚಂದ್ರಘಂಟಾ ದೇವಿಯರ
ಪೂಜಿಸಿ ಆರಾಧಿಸುವೆನಮ್ಮ
ಕಲ್ಮಶ ಕೊರತೆಗಳ ನೀಗಿಸಮ್ಮ


ಕುಶ್ಮಾಂಡ ಸ್ಕಂದಮಾತ
ಕಾತ್ಯಾಯಿನಿ ದೇವಿಯರ
ಪೂಜಿಸಿ ಆರಾಧಿಸುವೆನಮ್ಮ
ಸಂಪತ್ತು ಸೌಭಾಗ್ಯ ಬೇಡುವೆನಮ್ಮ

ಕಾಳರಾತ್ರಿ ಮಹಾಗೌರಿ
ಸಿದ್ಧಿದಾತ್ರಿ ದೇವಿಯರ
ಪೂಜಿಸಿ ಆರಾಧಿಸುವೆನಮ್ಮ
ವಿದ್ಯಾಬುದ್ಧಿ ಕೊಡು ಎಂದು ಬೇಡುವೆನಮ್ಮ

- ಹೆಚ್.ಕೆ.ಸತ್ಯಭಾಮಾ ಮಂಜುನಾಥ್
ದಾವಣಗೆರೆ

**ಕೈಲಾಸ ಸಮಾರಾಧನಾ ಆಹ್ವಾನ ಪತ್ರಿಕೆ**

॥ ಶ್ರೀ ಮರುಳ ಸಿದ್ದೇಶ್ವರ ಪ್ರಸನ್ನ ॥



ದಾವಣಗೆರೆ ಸಿಟಿ, ಹಗೇದಿಬ್ಬ ಸರ್ಕಲ್, ಆನೆಕೊಂಡ ಪೇಟೆ ಹಿಂಭಾಗ, ಎಸ್.ಎಸ್ ಗಲ್ಲಿ ಕಾಳಿಕಾದೇವಿ ರಸ್ತೆ ನಿವಾಸಿ

**ಮುದೇಗೌಡ್ರ ರುದ್ರಪ್ಪನವರು**

(ನಿವೃತ್ತ ರೆವಿನ್ಯೂ ಇನ್ಸ್‌ಪೆಕ್ಟರ್) ದಿನಾಂಕ 18.10.2020 ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಸಮಾರಧಾನೆಯನ್ನು**

**ದಿನಾಂಕ 22.10.2020ನೇ ಗುರುವಾರ ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಗೃಹ ದಾವಣಗೆರೆಯಲ್ಲಿ** ನೆರವೇರಿಸಲಾಗುವುದು.

ಇಂತಿ ದುಃಖತಪ್ತರು: ಮೃತರ ಧರ್ಮಪತ್ನಿ ಶ್ರೀಮತಿ ಸಿದ್ದಮ್ಮನವರು, ಪುತ್ರ: ಎಂ.ಬಸವರಾಜ, ಪುತ್ರಿಯರು, ಅಳಿಯಂದಿರು ಮತ್ತು ಮುದೇಗೌಡ್ರ ವಂಶಸ್ಥರು ದಾವಣಗೆರೆ. 83100 40701


ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕೆ ವಿನಂತಿ.

## ಎಲೆಬೇತೂರು ಮಾಳಿಗೇರ ಪುಷ್ಪಾವತಿ ನಿಧನ



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ವಾಸಿ, ಮಾಳಿಗೇರ ಪರಮೇಶರಪ್ಪನವರ ಧರ್ಮಪತ್ನಿ ಶ್ರೀಮತಿ ಪುಷ್ಪಾವತಿ (ಕಾಳಮ್ಮ) ಅವರು ದಿನಾಂಕ 19.10.2020ರ ಸೋಮವಾರ ರಾತ್ರಿ 10.30ಕ್ಕೆ ನಿಧನರಾದರು. ಪತಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 20.10.2020ರ ಮಂಗಳವಾರ ಬೆಳಿಗ್ಗೆ ಎಲೆಬೇತೂರಿನ ಅವರ ತೋಟದಲ್ಲಿ ನೆರವೇರಿತು.

## ಕೆ.ಎಂ. ಇಂದೂಧರ ನಿಧನ



ದಾವಣಗೆರೆ ಲೆನಿನ್‌ನಗರ ವಾಸಿ, ಕೆ.ಎಂ. ಇಂದೂಧರ (43) ಇವರು ದಿನಾಂಕ 20.10.2020ರಂದು ಮಂಗಳವಾರ ಸಂಜೆ 6 ಗಂಟೆಗೆ ನಿಧನರಾಗಿದ್ದಾರೆ. ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 21.10.2020ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಹರಿಹರ ತಾಲ್ಲೂಕು ಎಳೆಹೊಳೆ ಗ್ರಾಮದಲ್ಲಿ ನೆರವೇರಲಿದೆ.

# ದಂಡ ಬದಲು ಮಾಸ್ಕ್ ವಿತರಿಸಿದ ಗ್ರಾಮಾಂತರ ಪೊಲೀಸರು




**ಆನಗೋಡಿನಲ್ಲಿ 'ನನ್ನ ಮಾಸ್ಕ್ ನನ್ನ ಲಸಿಕೆ'**

ದಾವಣಗೆರೆ, ಅ.20- ಇಲ್ಲಿನ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಆನಗೋಡು ಗ್ರಾಮದಲ್ಲಿ 'ನನ್ನ ಮಾಸ್ಕ್ ನನ್ನ ಲಸಿಕೆ' ಕಾರ್ಯಕ್ರಮವನ್ನು ಶನಿವಾರ ಹಮ್ಮಿಕೊಳ್ಳಲಾಗಿತ್ತು.

ಗ್ರಾಮಾಂತರ ಡಿವೈಎಸ್ಪಿ ನರಸಿಂಹ ವಿ. ತಾಮ್ರಧ್ವಜ ನೇತೃತ್ವದಲ್ಲಿ ಹಾಗೂ ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್ ಐ ಅಶ್ವಿನ್ ಕುಮಾರ್ ಮತ್ತು ಅಪರಾಧ ವಿಭಾಗದ ಪಿಎಸ್ ಐ ಎಂ. ಪಾಷಾ ಹಾಗೂ ಸಿಬ್ಬಂದಿಗಳಿಂದ ಮಾಸ್ಕ್ ಧರಿಸದವರಿಗೆ ದಂಡ ವಿಧಿಸುವ ಬದಲು ಮಾಸ್ಕ್ ಅನ್ನು ನೀಡುವ ಮೂಲಕ ಕೋವಿಡ್-19 ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಯಿತು. ನಂತರ ಆನಗೋಡು ಗ್ರಾಮದ ಶ್ರೀ ಮರುಳಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಗ್ರಾಮದ ಹಿರಿಯ ಮುಖಂಡರು ಹಾಗೂ ಗ್ರಾಮಸ್ಥರೊಂದಿಗೆ ಸಭೆ ನಡೆಸಲಾಯಿತು. ಈ ವೇಳೆ ಮಾತನಾಡಿದ ನರಸಿಂಹ ವಿ. ತಾಮ್ರಧ್ವಜ, ಪ್ರಸ್ತುತವಾಗಿ ಕೋವಿಡ್-19 ರ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಜೊತೆಗೆ ಇಲಾಖಾ ವತಿಯಿಂದ ಇಆರ್ ಎಸ್ ಎಸ್ '112' ಹಾಗೂ 'ಕರುಣಾಳು ವ್ಯಕ್ತಿ' ಬಗ್ಗೆ ಜನರಿಗೆ ತಿಳುವಳಿಕೆ ನೀಡಲಾಯಿತು.

## ನಗರ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ

ಶ್ರೀರಾಮ ಬಡಾವಣೆ, ಡಿ.ಸಿ.ಎಂ.ಟೌನ್‌ಶಿಪ್, ಶಕ್ತಿನಗರ, ಅಂಬಿಕಾ ನಗರ, ಕೊಟ್ಟೂರೇಶ್ವರ ಬಡಾವಣೆ, ಜಯನಗರ, ಶೇಖರಪ್ಪ ಗೋಡೌನ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವುಂಟಾಗಲಿದೆ.

# ಕೂಡ್ಲಿಗಿ ಪ.ಪಂ : ಅಧ್ಯಕ್ಷ ಚುನಾವಣೆಗೆ ತಡೆಯಾಜ್ಞೆ

ಕೂಡ್ಲಿಗಿ, ಅ.20 - ಕೂಡ್ಲಿಗಿ ಪಟ್ಟಣ ಪಂಚಾಯಿತಿ ಗದ್ದುಗೆ ಏರಲು ಅತಂತ್ರ ಸನ್ನಿವೇಶದಲ್ಲೂ ರಾಜಕೀಯದ ತಂತ್ರಗಾರಿಕೆಯಿಂದ ಎಲ್ಲವೂ ಸುಸೂತ್ರವಾಗಿ ನಡೆಸಿದ ಬಿಜೆಪಿಯ ತಯಾರಿಗೆ ನಿನ್ನೆ ಬಂದ ಹೈಕೋರ್ಟ್ ತಡೆಯಾಜ್ಞೆ ಮಂಕು ಕವಿದ ವಾತಾವರಣದಂತಾಗಿದೆ.

ಕೂಡ್ಲಿಗಿ ಪಟ್ಟಣ ಪಂಚಾಯತಿ 20 ಸದಸ್ಯರನ್ನೊಳಗೊಂಡಿದ್ದು, ಇತ್ತೀಚಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 7ಸ್ಥಾನ, ಕಾಂಗ್ರೆಸ್ 6ಸ್ಥಾನ, ಜೆಡಿಎಸ್ 4 ಸ್ಥಾನ ಮತ್ತು ಪಕ್ಷೇತರ 3 ಸ್ಥಾನ ಪಡೆದುಕೊಂಡು ಯಾವ ಪಕ್ಷಕ್ಕೂ ಅಧಿಕಾರ ಹಿಡಿಯಲು ಆಗದೇ ಅತಂತ್ರ ಸ್ಥಿತಿಯಲ್ಲಿದ್ದಾಗ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ಮೀಸಲಾತಿ ಆದೇಶ ಹೊರ ಬಿದ್ದಿದ್ದು, ಅಧ್ಯಕ್ಷ ಸ್ಥಾನ ಎಸ್ಸಿ ಮಹಿಳೆಗೆ ಮೀಸಲಾಗಿದ್ದು, ಉಪಾಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆಗೆ ಮೀಸಲಾಗಿತ್ತು. ಇದರಂತೆ ಎಸ್ಸಿ ಮಹಿಳೆಯರು ಬಿಜೆಪಿಯಲ್ಲಿ ಒಂದು, ಪಕ್ಷೇತರದಲ್ಲಿ ಒಂದು ಇದ್ದು, ಇತ್ತೀಚಿಗೆ ಕೋವಿಡ್ ನಿಂದ ಬಿಜೆಪಿ ಯ ಒಬ್ಬ, ಪಕ್ಷೇತರ ಸದಸ್ಯರೊಬ್ಬರು ಸೇರಿ ಇಬ್ಬರು ಸದಸ್ಯರು ಬಲಿಯಾಗಿದ್ದು, 18 ಸದಸ್ಯರ ಬಲಾಬಲದಲ್ಲಿ ಬಿಜೆಪಿ ಯ ಶಾರದಾಬಾಯಿ ಸೇರಿದಂತೆ ಬಿಜೆಪಿಯ ಆರು ಸದಸ್ಯರು, ಪಕ್ಷೇತರ ಇಬ್ಬರು ಸದಸ್ಯರು ಹಾಗೂ ಜೆಡಿಎಸ್ ನಾಲ್ಕು ಸದಸ್ಯರ ವಿಶ್ವಾಸ ಪಡೆದು ಶಾಸಕರ ಜೊತೆ ಚರ್ಚೆ ನಡೆಸಿ, ಹನ್ನೆರಡು ಸದಸ್ಯರ ಬಲದಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನವನ್ನು ಬಿಜೆಪಿ ಪಡೆದುಕೊಂಡು ಜೆಡಿಎಸ್‌ಗೆ ಸ್ಥಾಯಿಸಮಿತಿ ಸ್ಥಾನ ನೀಡುವ ಒಪ್ಪಂದ ಮಾಡಿಕೊಂಡು ಗದ್ದುಗೆ ಏರುವ, ಸುಸೂತ್ರ ಚುನಾವಣೆ ನಡೆಸುವ ರಾಜಕೀಯ ಪೂರ್ವ ತಂತ್ರಗಾರಿಕೆ ತಯಾರಿ ಮಾಡಿಕೊಂಡು ಅಕ್ಟೋಬರ್ 22ರಂದು ಚುನಾವಣೆ ಸಹ ನಡೆಸಲು ತಹಸೀಲ್ದಾರ್ ದಿನಾಂಕ ನಿಗದಿ ಮಾಡಿ, ತಯಾರಿ ಸುಸೂತ್ರವಾಗಿತ್ತು.

ಅವಿರೋಧ ಆಯ್ಕೆ ಮಾಡಿ, ಗದ್ದುಗೆ ಏರುವುದಕ್ಕೆ ಇನ್ನೆರಡೇ ದಿನ ಬಾಕಿ ಎನ್ನುವಾಗ ಸೋಮವಾರ ಸಂಜೆಯ ಪುರಸಭೆ ಪಟ್ಟಣ ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷ ಮೀಸಲು ಪ್ರಶ್ನಿಸಿ ಬೇರೆ ಜಿಲ್ಲೆಯಿಂದ ಕೋರ್ಟ್ ಮೊರೆ ಹೋಗಿದ್ದರಿಂದ ಕೋರ್ಟ್ ತಡೆಯಾಜ್ಞೆ ನೀಡಿದ ಸುದ್ದಿ ಹಿನ್ನೆಲೆಯಲ್ಲಿ ಕೂಡ್ಲಿಗಿ ಪಟ್ಟಣ ಪಂಚಾಯತಿ ಗದ್ದುಗೆ ಏರಲು ಸುಸೂತ್ರ ತಯಾರಿ ನಡೆಸಿದವರಿಗೆ ಮಂಕು ಕವಿದಂತಾಗಿದ್ದು, ವಿರೋಧ ಪಕ್ಷ ಕಾಂಗ್ರೆಸ್ ಸಂತಸದ ನಗೆ ಬೀರಿಸಿದೆ ಎಂದು ಹೇಳಬಹುದಾಗಿದೆ.

## ನಗರದಲ್ಲಿ ಇಂದಿನಿಂದ ಕುರಿ, ಮೇಕೆ ಸಾಕಾಣಿಕೆ ತರಬೇತಿ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯಿಂದ ಕುರಿ ಮತ್ತು ಮೇಕೆ ಸಾಕಾಣಿಕೆಯ ಉಚಿತ ತರಬೇತಿಯು ಇಂದಿನಿಂದ 3 ದಿನಗಳ ಕಾಲ ನಗರದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರದಲ್ಲಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ : 08192-233787.

# ಗೊಲ್ಲ ಅಭಿವೃದ್ಧಿ ನಿಗಮ ಸ್ಥಾಪನೆಗೆ ಒತ್ತಾಯ



**ಹರಪನಹಳ್ಳಿಯಲ್ಲಿ ಪ್ರತಿಭಟನೆ**

ಹರಪನಹಳ್ಳಿ, ಅ.20- ಅಖಿಲ ಕರ್ನಾಟಕ ಗೊಲ್ಲ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡುವಂತೆ ಒತ್ತಾಯಿಸಿ ತಾಲ್ಲೂಕು ಯಾದವ (ಗೊಲ್ಲ) ಸಂಘಟನೆ ಪ್ರತಿಭಟನೆ ಮೂಲಕ ತಹಶೀಲ್ದಾರರಿಗೆ ಮನವಿ ಸಲ್ಲಿಸಿತು.

ಗೌರವಾಧ್ಯಕ್ಷ ಐ.ಬಸವರಾಜ ಮಾತನಾಡಿ, ಸರ್ಕಾರದಿಂದ ಸೆ.29ರಂದು ಕಾಡುಗೊಲ್ಲ ಅಭಿವೃದ್ಧಿ ನಿಗಮ ಸ್ಥಾಪಿಸಲು ಆದೇಶ ಹೊರಡಿಸಿದ್ದು, ಆದರೆ ಬಹು ದಿನಗಳಿಂದ ಗೊಲ್ಲ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡುವಂತೆ ರಾಜ್ಯ ಗೊಲ್ಲ ಜನಾಂಗದವರ ಬೇಡಿಕೆಯಾಗಿದ್ದು, ಇತರೆ ಜನಾಂಗದಲ್ಲಿರುವಂತೆ ನಮ್ಮ ಜನಾಂಗದಲ್ಲಿಯೂ ಸಹ ಹಲವು ಉಪಜಾತಿಗಳಿವೆ. ಆದರೆ ನಮ್ಮ ಉಪಜಾತಿಗಳಲ್ಲಿ ಒಂದೇ ಉಪಜಾತಿಗೆ ಸೀಮಿತವಾಗುವಂತೆ ಕಾಡು ಗೊಲ್ಲ ಅಭಿವೃದ್ಧಿ ನಿಗಮ ಸ್ಥಾಪನೆಗೆ ಆದೇಶಿಸಿದ್ದು, ಇದರಿಂದ ಉಳಿದ ಗೊಲ್ಲ ಜನಾಂಗದ ಹಲವು ಉಪಜಾತಿಗಳಿಗೆ ಅನ್ಯಾಯವಾಗುತ್ತದೆ ಎಂದರು.

ಅಧ್ಯಕ್ಷ ಎಂ.ಶಿವಮೂರ್ತಪ್ಪ ಮಾತನಾಡಿ, ಗೊಲ್ಲ ಜನಾಂಗದಲ್ಲಿ ಉಪಜಾತಿಗಳು ಕಾಡು ಗೊಲ್ಲರಿಗಿಂತ ಜೀವನ ಅಲೆಮಾರಿಯಂತಾಗಿದೆ ಹಾಗೂ ಶೋಚನೀಯ ಸ್ಥಿತಿ ಇದ್ದು, ಉಳಿದ ಗೊಲ್ಲ ಜನಾಂಗದ ಉಪ ಪಂಗಡಗಳಲ್ಲಿ ಕುರಿ ಸಾಕಾಣಿಕೆ, ಹಂದಿ ಸಾಕಾಣಿಕೆ, ಪಶು ಸಂಗೋಪನೆ, ಹಾವಾಡಿಗರಾಗಿ, ಗಂಗೆತ್ತು ಆಡಿಸಿ ಹಾಗೂ ಪೌರ ಕಾರ್ಮಿಕರಾಗಿ ಜೀವನ ನಡೆಸುತ್ತಿದ್ದೇವೆ. ಅಲ್ಲದೇ ಜೀವನ ಉಪಯೋಗಕ್ಕಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಅಲೆಮಾರಿ ಜೀವನ ನಡೆಸುತ್ತಾ ಬಂದಿದ್ದೇವೆ. ಆದ ಕಾರಣ ಜಾತಿಯನ್ನು ಒಡೆಯದೆ ಕಾಡುಗೊಲ್ಲ ಅಭಿವೃದ್ಧಿ ನಿಗಮವನ್ನು ರದ್ದುಪಡಿಸಿ, ಎಲ್ಲಾ ಗೊಲ್ಲ ಉಪಜಾತಿಗಳನ್ನು ಒಟ್ಟಾಗಿ ಅಖಿಲ ಕರ್ನಾಟಕ ಗೊಲ್ಲ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಹೆಚ್. ಬಸವರಾಜ, ಕೋಟೆಪ್ಪ, ಮತ್ತೂರು ಬಸವರಾಜ, ಪ್ರಭಾವತಿ ಕೃಷ್ಣಪ್ಪ, ಹನುಮಂತಪ್ಪ, ಹೆಚ್.ಕೃಷ್ಣಪ್ಪ, ವಿಜಯಕುಮಾರ ಎನ್, ಟಿ.ನಿಂಗಪ್ಪ, ದೇವೇಂದ್ರಪ್ಪ ಎಲ್, ಕೆ.ಪ್ರವೀಣ, ವೈ.ದಿವಾಕರ, ನಾಗರಾಜ ಯಾದವ, ಸುರೇಶ್ ಸೇರಿದಂತೆ ಇತರರು ಇದ್ದರು.

# ಬಿ.ಸಿ.ಉಮಾಪತಿ ಅವರ ಮನೆಗೆ ಗೃಹಮಂತ್ರಿ ಬೊಮ್ಮಾಯಿ ಭೇಟಿ



ದಾವಣಗೆರೆ, ಅ.20- ಗೃಹ ಖಾತೆ ಸಚಿವ ಬಸವರಾಜ ಬೊಮ್ಮಾಯಿ ಅವರು ನಿನ್ನೆ ಬೆಳಿಗ್ಗೆ ಬೆಂಗಳೂರಿನಿಂದ ಹುಬ್ಬಳ್ಳಿಗೆ ಹೋಗುವ ಮಾರ್ಗಮಧ್ಯೆ ಪಂಚಮಸಾಲಿ ಜಗದ್ಗುರು ಪೀಠದ ಪ್ರಧಾನ ಧರ್ಮದರ್ಶಿಯೂ ಆದ ಜವಳಿ ಉದ್ಯಮಿ ಬಿ.ಸಿ.ಉಮಾಪತಿ ಅವರ ನಿವಾಸಕ್ಕೆ ಸೌಹಾರ್ದ ಭೇಟಿ ನೀಡಿದ್ದರು.

ರಾಣೇಬೆನ್ನೂರು ಶಾಸಕ ಅರುಣ್‌ಕುಮಾರ ಪೂಜಾರ ಅವರು ಬೊಮ್ಮಾಯಿ ಅವರೊಂದಿಗಿದ್ದರು. ಬಿ.ಸಿ. ಉಮಾಪತಿ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಗಿರಿಜಾ ದಂಪತಿ ಹಾಗೂ ಕುಟುಂಬದ ಸದಸ್ಯರು ಬೊಮ್ಮಾಯಿ ಅವರನ್ನು ಆತ್ಮೀಯವಾಗಿ ಬರ ಮಾಡಿಕೊಂಡು ಸತ್ಕರಿಸಿ, ಬೀಳ್ಕೊಟ್ಟರು.

# ಅಂತ್ಯವಾಗಿದೆ, ವೈರಸ್ ಅಲ್ಲ

**(1ನೇ ಪುಟದಿಂದ)** ಮಾಸ್ಕ್ ಧರಿಸಿ, ಸ್ಯಾನಿಟೈಜರ್ ಬಳಸಿ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳಿ ಎಂದು ಪ್ರಧಾನಿ ಮನವಿ ಮಾಡಿಕೊಂಡಿದ್ದಾರೆ.

ಲಾಕ್‌ಡೌನ್ ಅಂತ್ಯವಾಗಿದೆಯೇ ಹೊರತು ವೈರಸ್ ಅಲ್ಲ. ವೈರಸ್ ಅಂತ್ಯವಾಗಿದೆ, ಅದರಿಂದ ಅಪಾಯವಿಲ್ಲ ಎಂದು ನಿರ್ಲಕ್ಷ್ಯ ತೋರುವ ಸಮಯ ಇದಲ್ಲ ಎಂದು ಪ್ರಧಾನಿ ತಿಳಿಸಿದ್ದಾರೆ.

ಕಳೆದ ಏಳೆಂಟು ತಿಂಗಳಲ್ಲಿ ಪ್ರತಿಯೊಬ್ಬ ಭಾರತೀಯನ ಪರಿಶ್ರಮದಿಂದಾಗಿ ಪರಿಸ್ಥಿತಿ ಸ್ಥಿರವಾಗಿದೆ. ಈ ಪರಿಸ್ಥಿತಿ ಹದಗೆಡದಂತೆ ನೋಡಿಕೊಳ್ಳಬೇಕಿದೆ. ಕೊರೊನಾಗೆ ಲಸಿಕೆ ಬರುವವರೆಗೂ ಮೈ ಮರೆಯಬಾರದು ಎಂದು ಮೋದಿ ಕಿವಿಮಾತು ಹೇಳಿದ್ದಾರೆ.

ವಿಶ್ವದಾದ್ಯಂತ ಕೊರೊನಾ ಲಸಿಕೆಗಾಗಿ ಪ್ರಯತ್ನ ನಡೆಯುತ್ತಿದೆ. ಭಾರತದಲ್ಲೂ ಕೊರೊನಾ ಲಸಿಕೆ ರೂಪಿಸಲು ಸಮರೋಪಾದಿಯಲ್ಲಿ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಎಲ್ಲಿಯವರೆಗೆ ಔಷಧಿ ಸಿಗುವುದಿಲ್ಲವೋ ಅಲ್ಲಿಯವರೆಗೆ ನಿರ್ಲಕ್ಷ್ಯ ತೋರುವಂತಿಲ್ಲ (ಜಬ್ ತಕ್ ದವಾಯಿ ನಹಿ, ತಬ್ ತಕ್ ಢಿಲಾಯಿ ನಹಿ) ಎಂದು ಪ್ರಧಾನಿ ಹೇಳಿದ್ದಾರೆ.

# ನಿಮ್ಮ ಅಮೂಲ್ಯ ಜೀವ ಉಳಿಸಿಕೊಳ್ಳಲು ಮಾಸ್ಕ್ ಧರಿಸಿ



ಹರಪನಹಳ್ಳಿ

ಹರಪನಹಳ್ಳಿ, ಅ.20 - 2020 ಬರೀ ಆಪತ್ತು ಈ ಪ್ರಸ್ತುತ ವರ್ಷ ಸಾಧನೆ ಮಾಡಿದವರಿಗಿಂತ ಜೀವ ಉಳಿಸಿಕೊಂಡವರೇ ನಿಜವಾದ ಸಾಧಕರು ಎಂದು ಅಪರ ಸರ್ಕಾರಿ ವಕೀಲ ಕಣಿವಿಹಳ್ಳಿ ಮಂಜುನಾಥ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಇವರ ಜನಾಂದೋಲನ ಕೋವಿಡ್ 19 ವಿಷಯವಾಗಿ ಹರಪನಹಳ್ಳಿ ತಾಲ್ಲೂಕು ವಕೀಲರ ಸಂಘ, ಆರೋಗ್ಯ ಇಲಾಖೆ ಹಾಗೂ ಪುರಸಭೆ ಸಂಯುಕ್ತ ಆಶ್ರಯದಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಜ್ಞಾವಿಧಿ ಸ್ವೀಕರಿಸಿ ಅವರು ಮಾತನಾಡಿದರು.

ಪೊಲೀಸ್ ಇಲಾಖೆ ಭಯಕ್ಕೆ ನೀವು ಮಾಸ್ಕ್ ಹಾಕಿಕೊಳ್ಳುವುದಕ್ಕಿಂತ ನಿಮ್ಮ ಅಮೂಲ್ಯ ಜೀವ ಉಳಿಸಿಕೊಳ್ಳಲು ಮಾಸ್ಕ್ ಧರಿಸಿ, ಆಗಾಗ ಕೈತೊಳೆದುಕೊಳ್ಳುವುದು, ಸಾಮಾಜಿಕ ಅಂತರ ಕಾಯ್ದು ಕೊಳ್ಳುವುದು ಈ ವರ್ಷದ ಮಹತ್ತರ ಸಾಧನೆಯೇ ಆಗಲಿದೆ.

ಪ್ರತಿಜ್ಞಾ ವಿಧಿ ಸಮಯದಲ್ಲಿ ತಾಲ್ಲೂಕು ವೈದ್ಯಾಧಿಕಾರಿ ವೆಂಕಟೇಶ್, ಡಾ. ವಿಜಯಕುಮಾರ್, ವಕೀಲರುಗಳಾದ ಕೆ.ನಾಗರಾಜ್, ಎಂ. ಮೃತ್ಯುಂಜಯ್ಯ, ಬಂಡ್ರಿ ಆನಂದ, ಕೋಡಿಹಳ್ಳಿ ಪ್ರಕಾಶ್, ಎ.ಮಲ್ಲಪ್ಪ, ಡಿ. ಹನುಮಂತಪ್ಪ, ವೈ.ಟಿ. ಕೊಟ್ರೇಶ್, ವಾಮದೇವ, ಶ್ರೀನಿವಾಸ್, ಕೆ. ಪ್ರಕಾಶ್, ಓ ತಿರುಪತಿ, ನ್ಯಾಯಾಲಯದ ಸಿಬ್ಬಂದಿಗಳಾದ ಯ ಶೋಧ, ನಾಗರಾಜ್, ಮಂಜುನಾಥ್, ಬಸವ ರಾಜ್, ಕೊಟ್ರೇಶ್ ಮತ್ತಿತರರು ಹಾಜರಿದ್ದರು.

# ರಾಗಾ ನೇತೃತ್ವದಲ್ಲಿ ರಾಜ್ಯದಲ್ಲಿ ಕಿಸಾನ್ ಯಾತ್ರೆ

ದಾವಣಗೆರೆ, ಅ. 20- ಕೇಂದ್ರ ಸರ್ಕಾರದ ರೈತ ವಿರೋಧಿ ಸುಗ್ರೀವಾಜ್ಞೆಗಳನ್ನು ಖಂಡಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ರಾಜ್ಯದಲ್ಲಿ ಕಿಸಾನ್ ಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಸಚಿನ್ ಮಿಗಾ ಹೇಳಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂದಿನ ತಿಂಗಳು 7 ಅಥವಾ 8ನೇ ತಾರೀಖಿನಿಂದ ರಾಹುಲ್ ಗಾಂಧಿಯವರು ಯಾತ್ರೆಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಹುಬ್ಬಳ್ಳಿ-ಬೆಳಗಾಂ, ದಾವಣಗೆರೆ-ಚನ್ನಗಿರಿ-ಕಾಸರಗೋಡು, ಅಥವಾ ಬೀದರ್-ಗುಲಬರ್ಗ ಮಾರ್ಗ ಸೇರಿದಂತೆ 3 ಮಾರ್ಗಗಳಲ್ಲಿ ಯಾವುದಾದರೊಂದು ಮಾರ್ಗದಲ್ಲಿ ಯಾತ್ರೆ ನಡೆಯಲಿದ್ದು, ಮುಖಂಡರು ಪರಿಶೀಲಿಸಲಿದ್ದಾರೆ ಎಂದು ಸಚಿನ್ ಮಿಗಾ ತಿಳಿಸಿದರು.

ನರೇಂದ್ರ ಮೋದಿ ಪ್ರಧಾನಿ ಆದಾಗಿನಿಂದ ನೋಟು ಅಮಾನ್ಯೀಕರಣದಿಂದ ಹಿಡಿದು ಎಪಿಎಂಸಿ ಸೇರಿದಂತೆ ವಿವಿಧ ಕಾಯ್ದೆಗಳನ್ನು ರೂಪಿಸುವ ಮೂಲಕ ಉದ್ಯಮಿಗಳಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ ಎಂದು ಆರೋಪಿಸಿದರು.

ಎಪಿಎಂಸಿ ಕಾಯ್ದೆಯಿಂದ ರೈತರಿಗೆ ತಾತ್ಕಾಲಿಕ ಅಂದರೆ 12-16 ತಿಂಗಳವರೆಗೆ ಲಾಭದಾಯಕವಾಗ ಬಹುದು. ಆದರೆ, ಈ ಮಸೂದೆಯಿಂದ ಎಪಿಎಂಸಿಗಳು ನೆನೆಗುದಿಗೆ ಬೀಳುತ್ತವೆ. ವರ್ಷದ ನಂತರ ಮಾರುಕಟ್ಟೆ ಹೊರಗೆ ಖರೀದಿ ಸುತ್ತಿರುವ ಖರೀದಿದಾರರು ರೈತರ ಶೋಷಣೆಗೆ ನಿಲ್ಲುತ್ತಾರೆ. ಆಗ ರೈತರು ಮತ್ತೆ ಎಪಿಎಂಸಿಯತ್ತ ಮುಖ ಮಾಡಲು ಎಪಿಎಂಸಿಗಳೇ ಇರುವುದಿಲ್ಲ. ಎಪಿಎಂಸಿಗಳು ಬಂದ್ ಆದರೆ ಅನಿವಾರ್ಯವಾಗಿ ರೈತರು ಉದ್ಯಮಿಗಳ ಗುಲಾಮರಾಗಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆ ರಫೇಲ್ ಹಗರಣಕ್ಕಿಂತ ಅತಿ ದೊಡ್ಡ ಹಗರಣವಾಗಿದೆ. ರೈತರ ಹಿತಕ್ಕಾಗಿ ಬೆಳೆ ವಿಮೆ ಇದೆ. ಆದರೆ, ಕೇಂದ್ರ ಸರಕಾರ ಅದಾನಿ ಸಮೂಹ ಸಂಸ್ಥೆ ಮತ್ತು ರಿಲಯನ್ಸ್‌ನ ಮಾಲೀಕ ಅನಿಲ್ ಅಂಬಾನಿ ಅವರಿಗೆ ಸಹಾಯ ಮಾಡುವ ನಿಟ್ಟಿನಿಂದ ವಿಮಾ ಕಂಪನಿ ಹೆಸರಿನಲ್ಲಿ ರೈತರ ಬೆಳೆ ವಿಮೆ ಯೋಜನೆ ತಂದು ಸಾವಿರಾರು ಕೋಟಿ ರೂ.ಗಳ ಲಾಭ ಮಾಡಿಕೊಟ್ಟಿದ್ದಾರೆ ಎಂದು ಮಿಗಾ ಹೇಳಿದರು.

**ಸಂಸದರಿಗೆ ಮನವಿ:** ಇಂಡಿಯನ್ ಮೋಟಾರ್ ಬೈಕ್ ಆಕ್ಟ್ ನಲ್ಲಿ ವಾಹನಗಳ ಭಾಗಗಳಿಗೆ ಹಾನಿಯಾದರೆ ಪರಿಹಾರ ನೀಡುವಂತೆ ರೈತರ ಬೆಳೆಗೂ ಅದೇ ಮಾನದಂಡದಲ್ಲಿ ಪರಿಹಾರ ನೀಡುವಂತೆ ನಿಯಮದಲ್ಲಿ ತಿದ್ದುಪಡಿ ಮಾಡಲು ಒತ್ತಾಯಿಸುವಂತೆ ರಾಜ್ಯದ ಸಂಸದರಲ್ಲಿ ಅವರು ಇದೇ ವೇಳೆ ಮನವಿ ಮಾಡಿದರು.


ಮುಂದಿನ ದಿನಗಳಲ್ಲಿ ಬ್ಯಾಂಕ್‌ಗಳಲ್ಲಿ ಗ್ರಾಹಕರು ಇಟ್ಟಿರುವ ಠೇವಣಿಯನ್ನೂ ಬಳಸಿಕೊಂಡು ಶಕ್ತಿಹೀನ ಬ್ಯಾಂಕುಗಳನ್ನು ಉತ್ತೇಜಿಸಲು ಮುಂದಾಗುವ ಎಫ್‌ಎಸ್‌ಡಿಆರ್ ಕಾಯ್ದೆ ಅನುಷ್ಠಾನಕ್ಕೆ ಮುಂದಾಗಿರುವುದು ದುರಂತ ಎಂದು ಹೇಳಿದರು.

ಕೇಂದ್ರದ ಧೋರಣೆ ವಿರುದ್ಧ ಜಿಲ್ಲೆಯಲ್ಲಿ ಸಹಿ ಸಂಗ್ರಹಿಸಿ ರಾಜ್ಯಪಾಲರಿಗೆ ಕಳುಹಿಸುವ ವ್ಯವಸ್ಥೆ ನಡೆಯುತ್ತಿದ್ದು, ಚಳವಳಿಯು ಪ್ರಧಾನ ಮಂತ್ರಿ ನಿವಾಸ ತಲುಪುವವರೆಗೂ ಮುಂದುವರೆಯುತ್ತದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಕಿಸಾನ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಶಿವಗಂಗಾ ಬಸವರಾಜ್, ದಿನೇಶ್ ಕೆ.ಶೆಟ್ಟಿ, ಮನೋಜ್ ರಾಜ್, ಪ್ರವೀಣ್ ಕುಮಾರ್, ಶಿವಕುಮಾರ್ ಇತರರು ಉಪಸ್ಥಿತರಿದ್ದರು.

# ಎರಡು ಮೇಲ್ಮನೆ, ಎರಡು ಕೆಳಮನೆ ಸ್ಥಾನಗಳು ಕಾಂಗ್ರೆಸ್ ಪಾಲು

ರಾಣೇಬೆನ್ನೂರು, ಅ.20 - ಶಿರಾ ಮತ್ತು ಆರ್. ಆರ್. ನಗರ ವಿಧಾನಸಭಾ ಉಪಚುನಾವಣೆಯಲ್ಲಿ ಕಾಂಗ್ರೆಸ್ ಎರಡೂ ಸ್ಥಾನಗಳಲ್ಲೂ ಜಯ ಗಳಿಸಲಿದೆ ಎಂದು ವಿಧಾನಸಭೆ ಮಾಜಿ ಅಧ್ಯಕ್ಷ ಕೆ.ಬಿ.ಕೋಳಿವಾಡ ವಿಶ್ವಾಸ ವ್ಯಕ್ತಪಡಿಸಿದರು.



ಅವರು ಇಂದು ತಮ್ಮ ನಿವಾಸದಲ್ಲಿ ಪತ್ರಕರ್ತರ ಜೊತೆ ಮಾತನಾಡುತ್ತಿದ್ದರು.

ಕೊರೊನಾ ಸೋಂಕು ಹರಡದಂತೆ ತಡೆಗಟ್ಟಲು ಕೈಗೊಳ್ಳಲಾದ ಕ್ರಮಗಳಲ್ಲಿ ಭ್ರಷ್ಟಾಚಾರ, ನೆರೆ ಹಾವಳಿಗೀಡಾದ ಜನರ ಅಲಕ್ಷತೆ ಮುಂತಾದ ಸರ್ಕಾರದ ಆಡಳಿತದ ಬಗ್ಗೆ ಬೇಸತ್ತಿರುವ ಜನತೆ, ಕಾಂಗ್ರೆಸ್ ಪಕ್ಷದತ್ತ ಒಲವು ತೋರಿಸುತ್ತಿದ್ದು, ಚುನಾವಣೆ ನಡೆಯುತ್ತಿರುವ ವಿಧಾನಪರಿಷತ್‌ನ ನಾಲ್ಕು ಸ್ಥಾನಗಳಲ್ಲಿ ಪಶ್ಚಿಮ ಪದವೀಧರ ಕ್ಷೇತ್ರ ಸೇರಿದಂತೆ, ಎರಡು ಸ್ಥಾನಗಳಲ್ಲಿ ಕಾಂಗ್ರೆಸ್ ಜಯ ಗಳಿಸಲಿದೆ ಎಂದು ಕೋಳಿವಾಡ ಹೇಳಿದರು.

**ಸೋಮಣ್ಣ ಕಾಂಗ್ರೆಸ್‌ಗೆ** : ವಿಧಾನ ಪರಿಷತ್ ಮಾಜಿ ಸದಸ್ಯ, ಬಿಜೆಪಿಯ ನಾಯಕ ಶಿಗ್ಗಾವಿಯ ಸೋಮಣ್ಣ ಬೇವಿನಮರದ ಅವರು ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನನ್ನನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ. ಅವರು ಕಾಂಗ್ರೆಸ್ ಪಕ್ಷ ಸೇರುವ ಇಚ್ಛೆ ವ್ಯಕ್ತಪಡಿಸಿದ್ದಾರೆ. ಚುನಾವಣೆಗಳು ಮುಗಿದ ನಂತರ ಅಧಿಕೃತವಾಗಿ ಕಾಂಗ್ರೆಸ್ ಪಕ್ಷ ಸೇರಲಿದ್ದಾರೆ ಎಂದು ಕೋಳಿವಾಡ ವಿವರಿಸಿದರು.

**ರಾಘುವೇಂದ್ರಗೆ ನೀತಿ, ಸಂಹಿತೆ ಇಲ್ಲಾ!**

ಜಿಲ್ಲಾ ಉಸ್ತುವಾರಿ ಸಚಿವರ ಹಾಗೂ ಸ್ಥಳೀಯ ಶಾಸಕರ ಜೊತೆ ಚರ್ಚಿಸಿ ಮಠದ ಅಭಿವೃದ್ಧಿಗೆ ಸಹಾಯ ಮಾಡುವುದಾಗಿ ಶಿವಮೊಗ್ಗ ಸಂಸದ ಬಿ.ವೈ.ರಾಘುವೇಂದ್ರ ಅವರು ರಾಣೇಬೆನ್ನೂರಿನಲ್ಲಿ ನಡೆದ ದಿಂಡದಹಳ್ಳಿ ಮಠದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಹೇಳಿದರೆನ್ನಲಾಗಿರುವುದು ನೀತಿ, ಸಂಹಿತೆ ಉಲ್ಲಂಘನೆ ಆಗುತ್ತದೆ. ಆದರೆ ಅವರ ಪಕ್ಷದ ಸರ್ಕಾರ ಇರುವುದರಿಂದ ಪೊಲೀಸರು ಯಾವ ಕ್ರಮವನ್ನು ಅವರ ವಿರುದ್ಧ ಜರುಗಿಸಲಾರರು ಎಂದು ಕೋಳಿವಾಡ ಅವರು ಪ್ರಶ್ನೆಗೆ ಪ್ರತಿಕ್ರಿಯಿಸಿದರು.

## ಪದವೀಧರ ಕ್ಷೇತ್ರ : ಪಿ.ಆರ್. ದಾಸ್ ಅಭ್ಯರ್ಥಿ

ದಾವಣಗೆರೆ, ಅ. 20- ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ವಕೀಲರಾದ ಪಿ.ಆರ್. ದಾಸ್ ಅವರನ್ನು ಅಭ್ಯರ್ಥಿಯನ್ನಾಗಿ ಕಣದಲ್ಲಿ ಇಳಿಸಲಾಗಿದೆ ಎಂದು ರಾಜ್ಯ ಕಾಡುಗೊಲ್ಲ ಸಂಘಟನೆಗಳ ಒಕ್ಕೂಟದ ಮುಖಂಡ ಡಾ. ದೊಡ್ಡಮಲ್ಲಯ್ಯ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಧ್ಯ ಕರ್ನಾಟಕದ ಬುಡಕಟ್ಟು ಮತ್ತು ಪ್ರಧಾನ ಸಮುದಾಯವಾದ ಕಾಡುಗೊಲ್ಲ ಜನಾಂಗದ ರಾಜಕೀಯ ಪ್ರಾತಿನಿಧ್ಯಕ್ಕಾಗಿ ದಾಸ್ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಲಾಗಿದೆ ಎಂದರು. ಅಭ್ಯರ್ಥಿ ಪಿ.ಆರ್. ದಾಸ್ ಮಾತನಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಒಕ್ಕೂಟದ ಮುಖಂಡರಾದ ಕೂನಿಕೆರೆ ರಾಮಣ್ಣ, ಕೆ. ರವಿಕುಮಾರ್, ಡಿ. ಬಸವರಾಜ, ಚಂದ್ರಹಾಸ್ ಮತ್ತಿತರರಿದ್ದರು.

## ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ

ಜೆ.ಹೆಚ್.ಪಿ. ಬಡಾವಣೆ, ಶಾಮನೂರು, ಶಿವ ಪಾರ್ವತಿ ಬಡಾವಣೆ, ನಾಗನೂರು ರಸ್ತೆ, ಡಾಲರ್ಸ್ ಕಾಲೋನಿ, ಬನಶಂಕರಿ ಬಡಾವಣೆ, ಜರೀಕಟ್ಟೆ, ಬಿಸಲೇರಿ, ಶಿರಮಗೊಂಡನಹಳ್ಳಿ, ನಾಗನೂರು, ಆರನೇ ಮೈಲಿಗಲ್ಲು, ಏಳನೇ ಮೈಲಿಗಲ್ಲು, ಜವಳಘಟ್ಟ ಮತ್ತು ಮುದಹದಡಿ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ 6.30 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಅರ್ಥಪೂರ್ಣ ರಾಜ್ಯೋತ್ಸವ

**(1ನೇ ಪುಟದಿಂದ)** ಮಾರ್ಗಸೂಚಿ ಹೊರಡಿಸಿವೆ.

ಅಲ್ಲದೇ, ಆಗ್ನೇಯ ಪದವೀಧರ ಕ್ಷೇತ್ರಕ್ಕೂ ಚುನಾವಣೆ ಪ್ರಕ್ರಿಯೆ ನಡೆದಿರುವುದರಿಂದ ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿಯಲ್ಲಿದ್ದು, ಇದನ್ನೂ ಪಾಲಿಸಬೇಕಿದೆ. ಹೀಗಾಗಿ ಆದಷ್ಟು ಮುಂಜಾಗ್ರತೆ ಕ್ರಮಗಳನ್ನು ಅನುಸರಿಸಿಕೊಂಡು ಕನ್ನಡ ತಾಯಿಯ ಹಬ್ಬವನ್ನು ನವೆಂಬರ್ 1ರಂದು ಸರಳ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದರು.

ಕಾರ್ಯಕ್ರಮ ನಿಮಿತ್ಯ ಅಂದು ಬೆಳಿಗ್ಗೆ 8 ಗಂಟೆಗೆ ಕನ್ನಡ ತಾಯಿ ಭುವನೇಶ್ವರಿ ದೇವಿಯ ಮೆರವಣಿಗೆ ಪ್ರಾರಂಭವಾಗಲಿದ್ದು, 6 ಕಲಾತಂಡಗಳು ಹಾಗೂ ಸಾಮಾಜಿಕ ಅಂತರ ಕಾಯ್ದುಕೊಂಡು ಮೆರವಣಿಗೆ ನಡೆಸಲಾಗುವುದು. ಬೆಳಿಗ್ಗೆ 10 ಗಂಟೆಗೆ ಕ್ರೀಡಾಂಗಣದಲ್ಲಿ ರಾಷ್ಟ್ರ ಧ್ವಜಾರೋಹಣ ಸಮಾರಂಭ ನೆರವೇರಲಿದೆ.

ಮಾದರಿ ನೀತಿ ಸಂಹಿತೆಯನ್ವಯ ಚುನಾವಣಾ ಆಯೋಗದ ಸೂಚನೆಗಳನ್ನು ಪಾಲಿಸುವ ನಿಟ್ಟಿನಲ್ಲಿ ಸ್ತಬ್ಧ ಚಿತ್ರ ಪ್ರದರ್ಶನ ಹಾಗೂ ಅಭಿವೃದ್ಧಿಪರ ಭಾಷಣ ಇರುವುದಿಲ್ಲ. ಮಕ್ಕಳ ಪಾಲ್ಗೊಳ್ಳುವಿಕೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಇರುವುದಿಲ್ಲ. ರಾಜ್ಯೋತ್ಸವದಂದು ಹಾಗೂ ಇದರ ಮುನ್ನಾದಿನದಂದು ಜಿಲ್ಲೆಯ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ ಕಟ್ಟಡಗಳು, ಹೋಟೆಲ್‌ಗಳು ಕನ್ನಡ ಪ್ರೇಮಿಗಳು ತಮ್ಮ ಕಟ್ಟಡಗಳಿಗೆ ಹಳದಿ ಹಾಗೂ ಕೆಂಪು ವಿದ್ಯುತ್ ದೀಪಾಲಂಕಾರ ಕೈಗೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ನಗರದಲ್ಲಿನ ಎಲ್ಲ ಅಂಗಡಿ, ಸಂಸ್ಥೆಗಳ ನಾಮಫಲಕಗಳನ್ನು ಕಡ್ಡಾಯವಾಗಿ ಕನ್ನಡಮಯಗೊಳಿಸಬೇಕು. ಈ ನಿಟ್ಟಿನಲ್ಲಿ ನವೆಂಬರ್ ತಿಂಗಳಿನಲ್ಲಿಯೇ ಚಾಲನೆ ನೀಡಲು ಸೂಕ್ತ ಕ್ರಮ ಕೈಗೊಳ್ಳಬೇಕು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕ ಗಳಿಸಿದವರನ್ನು ಗುರುತಿಸಿ ಅಂತಹವರನ್ನು ಜಿಲ್ಲಾಡಳಿತ ಸನ್ಮಾನ ಮಾಡಬೇಕು ಎಂದು ಕನ್ನಡ ಸಂಘಟನೆಯ ಪ್ರತಿನಿಧಿಗಳು ಒತ್ತಾಯಿಸಿದರು. ಕನ್ನಡ ವಂಶದ ಮೊದಲ ದೊರೆ ಮಯೂರ ವರ್ಮನ ಪುತ್ಥಳಿ ಯನ್ನು ಜಿಲ್ಲಾ ಕೇಂದ್ರದಲ್ಲಿಯೇ ಸ್ಥಾಪಿಸಲು ಜಿಲ್ಲಾಡಳಿತ ಅಗತ್ಯ ಕ್ರಮ ಕೈಗೊಳ್ಳ ಬೇಕು ಎಂದು ಮನವಿ ಸಲ್ಲಿಸಿದರು. ಇದಕ್ಕೆ ಸ್ಪಂದಿಸಿದ ಜಿಲ್ಲಾಧಿಕಾರಿಗಳು ಕನ್ನಡ ಸಂಘಟನೆಗಳ ಮನವಿಯನ್ನು ಪುರಸ್ಕರಿಸಲಾಗುವುದು ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪದ್ಮಾ ಬಸವಂತಪ್ಪ, ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮ ಲ್ಲಪ್ಪ, ಉಪವಿಭಾಗಾಧಿಕಾರಿ ಮಮತಾ ಹೊಸಗೌಡರ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ನಜ್ಮಾ, ನಗರ ಪಾಲಿಕೆ ಆಯುಕ್ತ ವಿಶ್ವ ನಾಥ್ ಮುದಜ್ಜಿ, ಡಿವೈಎಸ್ಪಿ ತಾಮ್ರಧ್ವಜ ಮತ್ತಿತರರು ಭಾಗವಹಿಸಿದ್ದರು.

ದಸರಾ ಹಬ್ಬದ ಒಂದೊಂದು ದಿನವೂ ಒಂದೊಂದು ದುರ್ಗಾ ರೂಪ ಆರಾಧಿಸಲಾಗುತ್ತದೆ. ಒಂಭತ್ತು ದುರ್ಗಿಯರ ಕುರಿತಂತೆ...

ಐದನೇ ದಿನದ ದೇವಿಯ ರೂಪ ಸ್ಕಂದ ಮಾತಾ. ಈ ರೂಪದಲ್ಲಿ ತಾಯಿ ಸುಬ್ರಹ್ಮಣ್ಯನನ್ನು ತನ್ನ ಮಡಿಲಲ್ಲಿ ಹೊತ್ತಿರುವಳು. ಮಾತೃವಾತ್ಸಲ್ಯದ ಪ್ರತೀಕವಾದ ರೂಪ.

### ಸ್ಕಂದ ಮಾತಾ

ಸ್ಕಂದಮಾತೆಗೆ ನಮಿಸುವೆನು
ಪಂಚಮ ದುರ್ಗಿಗೆ ನಮಿಸುವೆನು //ಪ//

ಚೆಂದದಿ ಮಗುವನು ಹೊತ್ತಿಹ ತಾಯಿಗೆ
ಸಿಂಹವಾಹಿನಿಗೆ ನಮಿಸುವೆನು//ಅಪ//

ತ್ರೈಲೋಕ ಮಾತೆ ದುರ್ಗಾದೇವಿ
ತ್ರಿಲೋಕ ಚಕ್ರಾಧೀಶ್ವರಿ ದೇವಿ
ಅಲೌಕಿಕ ಆನಂದ ನೀಡುವ ದೇವಿ
ತ್ರಿಲೋಕ ಉದ್ಧರಿಪ ಮಾತೃದೇವಿ

ತಾಯೆ ನಾನು ಎಂದು ಸಾರಿಹಳು
ಕಾಯುವೆ ನಿಮ್ಮನು ಎನುತಿಹಳು
ಹಾಯಾಗಿ ನನ್ನ ಮಡಿಲಲಿರಿ ಎಂದು
ದಯಾಮಯಿ ತಾ ತೋರಿಹಳು

ಸ್ಕಂದ ಮಾತೆಗೆ ಭಕ್ತಿಲಿ ನಮಿಸಿ
ಮಂದಗಮನೆಯ ಸೇವೆಯ ನಡೆಸಿ
ಪಂಚಮಿ ದುರ್ಗಿಯ ಮನದಲಿ ನಿಲಿಸಿ
ಇಂದು ಹರಿ ಸೋದರಿಯ ಪ್ರಾರ್ಥಿಸಿ

- ಶ್ರೀ ಕೃಷ್ಣಾರ್ಪಣಮಸ್ತು
ಡಾ. ರೂಪಶ್ರೀ ಶಶಿಕಾಂತ್

## ಮಲೇಬೆನ್ನೂರಿನಲ್ಲಿ ಇಂದು ಜೆಡಿಎಸ್ ಸಭೆ

ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಇಂದು ಸಂಜೆ 4 ಗಂಟೆಗೆ ಆಗ್ನೇಯ ಪದವೀಧರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಆರ್.ಚೌಡರೆಡ್ಡಿ ತೂಪಲ್ಲಿ ಅವರ ಪರವಾಗಿ ಚುನಾವಣಾ ಸಭೆಯನ್ನು ಮಾಜಿ ಶಾಸಕ ಹೆಚ್.ಎಸ್.ಶಿವಶಂಕರ್ ಅವರ ನೇತೃತ್ವದಲ್ಲಿ ಕರೆಯಲಾಗಿದೆ ಎಂದು ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ ತಿಳಿಸಿದ್ದಾರೆ.

# ಜಿಲ್ಲಾ, ಪ್ರಾದೇಶಿಕ ಪತ್ರಿಕೆಗಳ ಸಬಲೀಕರಣಕ್ಕೆ ಬದ್ಧ : ವಾರ್ತಾ ಇಲಾಖೆ

ಬೆಂಗಳೂರು, ಅ.20- ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಸಬಲೀಕರಣಕ್ಕೆ ವಾರ್ತಾ ಇಲಾಖೆ ಬದ್ಧವಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹರ್ಷ ಭರವಸೆ ನೀಡಿದ್ದಾರೆ.



ಕರ್ನಾಟಕ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಸಂಪಾದಕರ ಸಂಘದ ಅಧ್ಯಕ್ಷ ಜೆ. ಆರ್.ಕೆಂಚೇಗೌಡ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಸಂಪಾದಕರ ಸಂಘದ ಪ್ರಧಾನ ಕಾರ್ಯದರ್ಶಿ ಡಾ. ನವೀನ್ ಕುಮಾರ್ ಅವರ ನೇತೃತ್ವದ ನಿಯೋಗದೊಂದಿಗೆ ಇಂದು ಸಭೆ ನಡೆಸಿದ ಹರ್ಷ ಅವರು, ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳಿಗೆ ಜಾಹೀರಾತು ಮತ್ತು ವೃತ್ತಿಪರ ಸಮಸ್ಯೆಗಳ ಪರಿಹಾರಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು. ಶೀಘ್ರದಲ್ಲೇ ಜಾಹೀರಾತು ನೀತಿ ಪರಿಷ್ಕರಣೆ ಮಾಡಲಾಗುವುದು ಎಂದು ತಿಳಿಸಿದರು.

ಗಾಂಧಿ ಜಯಂತಿ ಜಾಹೀರಾತನ್ನು ಕೇವಲ ಕಾಲು ಪುಟಕ್ಕೆ ಸೀಮಿತಗೊಳಿಸಿದ್ದರ ಬಗ್ಗೆ ಸಂಘದ ನಿಯೋಗವು ಆಕ್ಷೇಪ ವ್ಯಕ್ತಪಡಿಸಿದ್ದು, ಇದಕ್ಕೆ ಪ್ರತಿಕ್ರಿಯಿಸಿದ ಹರ್ಷ ಅವರು, ನವೆಂಬರ್ ತಿಂಗಳಲ್ಲಿ ಪೂರ್ಣ ಪುಟ ಜಾಹೀರಾತು ನೀಡುವ ಮೂಲಕ ಸರಿಪಡಿಸಲಾಗುವುದು ಎಂದು ಭರವಸೆ ನೀಡಿದರು.

ಇಂದು ಬೆಳಗ್ಗೆ ಕರ್ನಾಟಕ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಸಂಪಾದಕರ ಸಂಘದ ಕಾರ್ಯಕಾರಿ ಸಮಿತಿ ಸಭೆ ನಡೆದಿದ್ದು, ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳು ಎದುರಿಸುತ್ತಿರುವ ವೃತ್ತಿಪರ ಸಮಸ್ಯೆ ಮತ್ತು ಸವಾಲುಗಳ ಕುರಿತು ಚರ್ಚೆ ನಡೆಸಲಾಯಿತು.

ಜಾಹೀರಾತು ನೀಡುವಲ್ಲಿ ಸರ್ಕಾರದ ತಾರತಮ್ಯ ನೀತಿಯನ್ನು ಖಂಡಿಸಿದ್ದು, ಆರ್ಥಿಕ ಸಂಕಷ್ಟಗಳನ್ನು ಎದುರಿಸಲು ಮತ್ತು ಜನಪರ ಮಾಧ್ಯಮವಾಗಿ ಪತ್ರಿಕೆಗಳನ್ನು ನಡೆಸಲು ಸಂಘಟನಾತ್ಮಕವಾಗಿ ಮುನ್ನಡೆಯಲು ತೀರ್ಮಾನಿಸಲಾಯಿತು.

ಜಾಹೀರಾತು ನೀತಿ ಹೆಸರಿನಲ್ಲಿ ಪತ್ರಿಕೆಗಳಿಗೆ ಕೇವಲ ನಿರ್ಬಂಧಗಳನ್ನು ವಿಧಿಸುವ ಸರ್ಕಾರ ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಸಬಲೀಕರಣಕ್ಕೆ ಮುಂದಾಗಬೇಕು. ಏಜೆನ್ಸಿಗಳ ಬಾಕಿ ಪಾವತಿ, ಡಿಸ್‌ಪ್ಲೇ ಜಾಹೀರಾತು ನೀಡುವಂತೆಯೂ, ಟೆಂಡರ್ ಮತ್ತಿತರೆ ಇಲಾಖಾವಾರು ಜಾಹೀರಾತುಗಳ ಪ್ರಕಟಣೆಯ ಅಕ್ಷರ ಜೋಡಣೆ ಅಳತೆಯನ್ನು ಗರಿಷ್ಠತೆಗೆ ಹೆಚ್ಚಿಸುವುದು ಸೇರಿದಂತೆ ಅನೇಕ ಬೇಡಿಕೆಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಸಿ, ಸರ್ಕಾರಕ್ಕೆ ಬೇಡಿಕೆ ಮಂಡಿಸಲು ತೀರ್ಮಾನಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡರು ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಡಾ.ನವೀನ್ ಕುಮಾರ್, ಖಜಾಂಚಿ ಶಿವಪ್ರಕಾಶ್, ಉಪಾಧ್ಯಕ್ಷ ಕೆ.ಎಸ್. ಗಣೇಶ್, ಮಹಾಪೋಷಕ ಸೊಗಡು ವೆಂಕಟೇಶ್, ಸಂಘಟನಾ ಸಂಚಾಲಕ ಸೋಮಶೇಖರ್ ಕೆರಗೋಡು. ಎನ್. ರವಿಕುಮಾರ್ ಉಪಸ್ಥಿತರಿದ್ದರು.

# ಕೊಮಾರನಹಳ್ಳಿ ಕೆರೆ ಭರ್ತಿಗೆ ಕ್ಷಣಗಣನೆ



**ಅಧಿಕಾರಿಗಳ ಭೇಟಿ**

ಮಲ್ಲೇಬೆನ್ನೂರು ಅ.20 - ಕೊಮಾರನಹಳ್ಳಿಯ ಹೆಳವನಕಟ್ಟೆ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿಯ ಐತಿಹಾಸಿಕ ಕೆರೆ ಭರ್ತಿಗೆ ಕ್ಷಣಗಣನೆ ಪ್ರಾರಂಭವಾಗಿದ್ದು ಯಾವುದೇ ಕ್ಷಣದಲ್ಲಿ ಕೆರೆ ಕೋಡಿ ಬೀಳುವ ಸಾಧ್ಯತೆ ಇದೆ ಎಂದು ಉಪ ತಹಶೀಲ್ದಾರ್ ಆರ್.ರವಿ ತಿಳಿಸಿದ್ದರು.

ಮಂಗಳವಾರ ಕೊಮಾರನಹಳ್ಳಿ ಕೆರೆ ಕೋಡಿ ಬೀಳಲು ಅರ್ಧ ಅಡಿ ಮಾತ್ರ ಬಾಕಿ ಇದೆ ಎಂದರು ಕಳೆದ 10 ವರ್ಷಗಳ ನಂತರ ಕೆರೆ ಭರ್ತಿಯಾಗಿ ಕೋಡಿ ಬೀಳುವ ದೃಶ್ಯವನ್ನು ಕಣ್ತುಂಬಿ ಕೊಳ್ಳಲು ಜನ ಉತ್ಸುಕರಾಗಿದ್ದಾರೆ. 97 ಎಕರೆ ವಿಸ್ತೀರ್ಣ ಹೊಂದಿರುವ ಈ ಕೆರೆ ಶಿವಮೊಗ್ಗ-ಹೊಸಪೇಟೆ ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವುದರಿಂದ ಎಲ್ಲರ ಗಮನ ಸೆಳೆಯುತ್ತಿದೆ.

ಸುತ್ತಲೂ ಗುಡ್ಡಗಳಿಂದ ಆವರಿಸಿಕೊಂಡಿರುವ ಈ ಕೆರೆಗೆ ಐತಿಹಾಸಿಕ ಹಿನ್ನೆಲೆ ಇದೆ. ಈ ಕೆರೆಯನ್ನು ಅಭಿವೃದ್ಧಿಪಡಿಸಿ ಪ್ರವಾಸಿ ತಾಣವನ್ನಾಗಿ ಮಾಡಬೇಕೆಂದು ಶಾಸಕ ಎಸ್.ರಾಮಪ್ಪ, ಮಾಜಿ ಶಾಸಕರುಗಳಾದ ಹೆಚ್.ಎಸ್. ಶಿವಶಂಕರ್, ಬಿ.ಪಿ.ಹರೀಶ್, ಜಿ.ಪಂ ಸದಸ್ಯ ಬಿ. ಎಂ.ವಾಗೀಶ್ ಸ್ವಾಮಿ, ಎಪಿಎಂಸಿ ಸದಸ್ಯ ಜಿ. ಮಂಜುನಾಥ್ ಪಟೇಲ್ ಅವರು ನಿರಂತರ ಹೋರಾಟ ಮಾಡಿದ್ದನ್ನು ಮತ್ತು ಮಾಡುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು.

## ಕೋವಿಡ್ : ಈದ್‌ಮಿಲಾದ್ ಹಬ್ಬ ಸರಳ ಆಚರಣೆ

ದಾವಣಗೆರೆ ಅ.20 - ಜಿಲ್ಲೆಯಲ್ಲಿ ಈದ್ ಮಿಲಾದ್ (ಮಿಲಾದುನ್ನಬಿ) ಆಚರಿಸುವ ಬಗ್ಗೆ ವಕ್ಫ್ ಸಂಸ್ಥೆಗಳ ವ್ಯವಸ್ಥಾಪನಾ ಸಮಿತಿಯವರು ಕಡ್ಡಾಯವಾಗಿ ತೆಗೆದುಕೊಳ್ಳಬೇಕಾದ ಕ್ರಮಗಳು ಈ ಕೆಳಗಿನಂತಿವೆ.

ಇದೇ ದಿನಾಂಕ 30 ರಂದು ಆಚರಿಸಲಿರುವ ಈದ್ ಮಿಲಾದ್ ಹಬ್ಬದ ಪ್ರಯುಕ್ತ ನಡೆಯುವ ಸಾಮೂಹಿಕ ಮೆರವಣಿಗೆ (ಜುಲೂಸ್) ಹಾಗೂ ತೆರೆದ ಸ್ಥಳಗಳಲ್ಲಿ ಒಂದೆಡೆ ಸೇರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದ್ದು, ಮೊಹಲ್ಲಾಗಳಲ್ಲಿ ನಡೆಯುವ ಯಾವುದೇ ರೀತಿಯ ಹಗಲು-ರಾತ್ರಿಯ ಪ್ರವಚನ, ಸಾಂಸ್ಕೃತಿಕ ಕಾರ್ಯಕ್ರಮ, ಸಭೆ ಸಮಾರಂಭಗಳನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

ಮಸೀದಿಗಳಲ್ಲಿ ಹಾಗೂ ದರ್ಗಾಗಳಲ್ಲಿ ಸಾಮಾಜಿಕ ಅಂತರ ಹಾಗೂ ಕೋವಿಡ್-19ರ ಶಿಷ್ಟಾಚಾರದೊಂದಿಗೆ ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳ ಜೊತೆಗೆ ದೈಹಿಕ ಅಂತರ ಕಾಪಾಡಿಕೊಳ್ಳುವುದರ ಮೂಲಕ ಪ್ರಾರ್ಥನೆ ಸಲ್ಲಿಸಬೇಕು. ಸಾರ್ವಜನಿಕ ಪ್ರದೇಶಗಳಲ್ಲಿ ಧ್ವನಿವರ್ಧಕಗಳು, ಡಿಜಿಟಲ್ ಸೌಂಡ್ ಸಿಸ್ಟಮ್ (ಡಿ.ಜೆ.) ಬಳಕೆಯನ್ನು ನಿಷೇಧಿಸಲಾಗಿದೆ.

ದರ್ಗಾಗಳಿಗೆ ಕಡ್ಡಾಯವಾಗಿ ಎಲ್ಲರೂ ಮಾಸ್ಕ್ ಧರಿಸಿಕೊಂಡು ಬರಬೇಕು ಹಾಗೂ 60 ವರ್ಷ ಮೇಲ್ಪಟ್ಟ ನಾಗರಿಕರು. 10 ವರ್ಷದೊಳಗಿನ ಮಕ್ಕಳು ಮನೆಯಲ್ಲಿಯೇ ಹಬ್ಬದ ಆಚರಣೆಯನ್ನು ಮಾಡಬೇಕು. ಮತ್ತು ಪ್ರವೇಶ ದ್ವಾರದ ಬಳಿ ಸ್ಯಾನಿಟೈಸರ್, ಸೋಪಿನೊಂದಿಗೆ ಕೈ ತೊಳೆಯಲು ವ್ಯವಸ್ಥೆ ಮಾಡಬೇಕು.

ಖಬರಸ್ತಾನ್ ಒಳಗೊಂಡಂತೆ ಯಾವುದೇ ರೀತಿಯ ತೆರೆದ ಜಾಗದಲ್ಲಿ ಸಾಮೂಹಿಕ ಪ್ರಾರ್ಥನೆ, ಪ್ರವಚನ ಮುಂತಾದವುಗಳನ್ನು ಆಯೋಜಿಸಲು ಅವಕಾಶವಿರು ವುದಿಲ್ಲ. ಈ ಎಲ್ಲಾ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಜಿಲ್ಲಾ ವಕ್ಫ್ ಅಧಿಕಾರಿ ಸೈಯದ್ ಮೊಅಜಂ ಪಾಷ ಹಾಗೂ ಜಿಲ್ಲಾ ವಕ್ಫ್ ಸಲಹಾ ಸಮಿತಿ ಅಧ್ಯಕ್ಷ ಮೊಹಮ್ಮದ್ ಸಿರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ರೈಲ್ವೆ ಬಿಡಿಭಾಗಗಳ ಸಾಗಿಸುತ್ತಿದ್ದ ಟ್ರಕ್ ಪಲ್ಟಿ



ದಾವಣಗೆರೆ, ಅ.20- ರೈಲ್ವೆ ಬಿಡಿಭಾಗಗಳನ್ನು ಹೊತ್ತೊಯ್ಯುತ್ತಿದ್ದ ಟ್ರಕ್ ವೊಂದು ಮಗುಚಿ ಬಿದ್ದಿದ್ದು, ಚಾಲಕ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ನಗರದಲ್ಲಿ ನಡೆದಿದೆ.

ಪೂನಾದಿಂದ ಚೆನ್ನೈನತ್ತ ದಾವಣಗೆರೆ ಮುಖೇನ ಬೈಪಾಸ್ ರಸ್ತೆಯಲ್ಲಿ ಸಾಗುತ್ತಿದ್ದ ವೇಳೆ ಚಾಲಕನ ನಿಯಂತ್ರಣ ತಪ್ಪಿ ಸೋಮವಾರ ಮಧ್ಯರಾತ್ರಿ 2 ಗಂಟೆಯ ಸುಮಾರಿಗೆ ಎಸ್ಸೆಸ್ ಆಸ್ಪತ್ರೆ ಸಮೀಪದ ಸೇವಾ ರಸ್ತೆಯಲ್ಲಿ ಪಲ್ಟಿಯಾಗಿದೆ. ಚಾಲಕ ಅದೃಷ್ಟವಶಾತ್ ಪಾರಾಗಿದ್ದಾನೆ.

## ಪ್ರವಾಹ ಸಂತ್ರಸ್ತರಿಗೆ ಸಹಾಯ ಮಾಡಲು ರೆಡ್ ಕ್ರಾಸ್‌ನೊಂದಿಗೆ ಕೈ ಜೋಡಿಸಿ

ದಾವಣಗೆರೆ, ಅ.20- ಕರ್ನಾಟಕ ರಾಜ್ಯದ ಪ್ರವಾಹ ಸಂತ್ರಸ್ತರಿಗೆ ನೆರವು ನೀಡಲು ದಾವಣಗೆರೆ ರೆಡ್ ಕ್ರಾಸ್ ಘಟಕ ಹಾಗೂ ಲೈಫ್ ಲೈನ್ ಸ್ವಯಂ ಪ್ರೇರಿತ ರಕ್ತದಾನಿಗಳ ಸಮೂಹಗಳ ಜೊತೆಗೂಡಿ ಸಂತ್ರಸ್ತರಿಗೆ ಆಹಾರ ಪದಾರ್ಥ, ಗೃಹಪಯೋಗಿ ವಸ್ತುಗಳು, ಹೊಸ ಬಟ್ಟೆ, ಹೊದಿಕೆಗಳನ್ನು ತಲುಪಿಸಲು ಮುಂದಾಗಿದೆ ಎಂದು ರೆಡ್ ಕ್ರಾಸ್ ಚೇರ್ಮನ್ ಡಾ. ಎ.ಎಂ. ಶಿವಕುಮಾರ್ ದಾನಿಗಳು ರೆಡ್ ಕ್ರಾಸ್ ನೊಂದಿಗೆ ಕೈ ಜೋಡಿಸಿ ಸಾಮಗ್ರಿಗಳನ್ನು ನಗರದ ರೆಡ್ ಕ್ರಾಸ್ ಕಚೇರಿಗೆ ತಂದು ಕೊಡಬಹುದು. ಸಮಯ : ಸೋಮವಾರ ದಿಂದ ಬುಧವಾರದವರೆಗೆ ಪ್ರತಿದಿನ ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ.

### ಬಿಎಸ್‌ವೈ ನಾಯಕತ್ವ ಬದಲಾವಣೆ!

# ಉತ್ತರ ಕರ್ನಾಟಕದವರೇ ಮುಂದಿನ ಮುಖ್ಯಮಂತ್ರಿ : ಯತ್ನಾಳ್



ಬೆಂಗಳೂರು, ಅ. 20 - ವಿಧಾನಸಭಾ ಉಪಚುನಾವಣೆಯ ನಂತರ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರ ನಾಯಕತ್ವ ಬದಲಾವಣೆಯಾಗಲಿದೆ ಎಂದು ಕೇಂದ್ರದ ಮಾಜಿ ಸಚಿವ, ಬಿಜೆಪಿಯ ಹಿರಿಯ ಶಾಸಕ ಬಸವನಗೌಡ ಪಾಟೀಲ್ ಯತ್ನಾಳ್ ಇಂದಿಲ್ಲಿ ಬಾಂಬ್ ಸಿಡಿಸಿದ್ದಾರೆ.

ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಬಹಳ ದಿನ ಇರುವುದಿಲ್ಲ. ಪಕ್ಷದ ವರಿಷ್ಠರಿಗೂ ಇವರ ಬಗ್ಗೆ ಸಾಕಾಗಿದೆ ಎಂದವರು ತಿಳಿಸಿದ್ದಾರೆ. ಆದರೆ, ಯತ್ನಾಳ್ ಹೇಳಿಕೆಗೆ ಯಾವುದೇ ಬೆಲೆ ಇಲ್ಲ ಎಂದು ಉಪಮುಖ್ಯಮಂತ್ರಿ ಡಾ. ಅಶ್ವತ್ಥ್‌ನಾರಾಯಣ್, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಗೋಪಾಲಯ್ಯ ಸೇರಿದಂತೆ, ಹಲವು ಮಂತ್ರಿಗಳು ಹೇಳಿದ್ದಾರೆ.

ರಾಜ್ಯದಲ್ಲಿ ನಾಯಕತ್ವ ಬದಲಾವಣೆ ಇಲ್ಲ. ಯಡಿಯೂರಪ್ಪನವರೇ ಮುಖ್ಯಮಂತ್ರಿಯಾಗಿ ಪೂರ್ಣ ಅವಧಿ ಮುಗಿಸಲಿದ್ದಾರೆ ಎಂದವರು ತಿಳಿಸಿದ್ದಾರೆ.

ಯತ್ನಾಳ್ ಅವರ ಹೇಳಿಕೆಗೆ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ವ್ಯಂಗ್ಯವಾಡಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು, ಯತ್ನಾಳ್‌ಗೆ ದೂರವಾಣಿ ಮೂಲಕ ಫೋನ್ ಮಾಡಿ, ಬದಲಾವಣೆ ಮಾಡುತ್ತೇವೆ ಎಂದು ಹೇಳಿದ್ದಾರಾ? ಎಂದು ಕೇಳಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ್ದ ಯತ್ನಾಳ್, ಉತ್ತರ ಕರ್ನಾಟಕ ಭಾಗದವರೇ ರಾಜ್ಯದ ಮುಂದಿನ ಮುಖ್ಯಮಂತ್ರಿ ಎಂದು ಭವಿಷ್ಯ ನುಡಿದಿದ್ದಾರೆ.

ನಮ್ಮ ಭಾಗದಿಂದ 100 ಬಿಜೆಪಿ ಶಾಸಕರನ್ನು ಆಯ್ಕೆ ಮಾಡಿ ಕಳುಹಿಸಿದ್ದೇವೆ. ಆದರೆ ಹಳೇ ಮೈಸೂರು ಭಾಗದಲ್ಲಿ ಕೇವಲ 10 ರಿಂದ 20 ಶಾಸಕರಷ್ಟೇ ಬಿಜೆಪಿ ಚಿಹ್ನೆಯಡಿ ಆಯ್ಕೆಯಾಗುತ್ತಾರೆ.

ಇವರದ್ದೇ ರಾಜ್ಯಭಾರ, ಇವರಲ್ಲಿ ಆಯ್ಕೆಗೊಂಡವರೇ ನಾಯಕತ್ವವನ್ನು ವಹಿಸಿಕೊಳ್ಳುತ್ತಾರೆ ಎಂದು ಕಿಡಿಕಾರಿದ್ದಾರೆ.

ಮಂಡ್ಯ, ಚಾಮರಾಜನಗರ, ಹಾಸನ, ಕೋಲಾರ, ಚಿಕ್ಕಬಳ್ಳಾಪುರದಲ್ಲಿ ಬಿಜೆಪಿಗೆ ವೋಟ್ ಹಾಕುತ್ತಾರಾ? ಇದು ಮೇಲಿನವರಿಗೂ ತಿಳಿದಿದೆ.

ಉತ್ತರಾಧಿಕಾರಿ ಉತ್ತರ ಕರ್ನಾಟಕದವರೇ ಆಗುತ್ತಾರೆ. ಪ್ರಧಾನ ಮಂತ್ರಿಗಳ ಮನಸ್ಸಿನಲ್ಲೂ ಈ ವಿಚಾರ ಬಂದಿದೆ. ನಮ್ಮವರೇ ಮುಂದಿನ ಮುಖ್ಯಮಂತ್ರಿ. ಇದು ಫೈನಲ್ ಆಗಿದೆ ಎಂದು ಯತ್ನಾಳ್ ತಿಳಿಸಿದ್ದಾರೆ.

ಯತ್ನಾಳ್ ಹೇಳಿಕೆ ಹೊರಬೀಳುತ್ತಿದ್ದಂತೆ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಸಮರ್ಥಿಸಿಕೊಂಡು ಬಹಳಷ್ಟು ಸಚಿವರು ಹೇಳಿಕೆ ನೀಡಿದ್ದಾರೆ.

ಯಡಿಯೂರಪ್ಪ ಸಮರ್ಥರಾಗಿದ್ದಾರೆ ಎಂದಿರುವ ಗೋಪಾಲಯ್ಯ, ಕಷ್ಟದ ಕಾಲದಲ್ಲಿ ಸರ್ಕಾರ ನಡೆಸಿಕೊಂಡು ಹೋಗುತ್ತಿದ್ದಾರೆ. ಅವರ ಬದಲಾವಣೆಯ ಪ್ರಶ್ನೆಯೇ ಇಲ್ಲ, ನಾವು ಅವರ ನಾಯಕತ್ವದಲ್ಲಿ ಉಳಿಯುತ್ತೇವೆ. ಯಡಿಯೂರಪ್ಪನವರೇ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎಂದು ಹೇಳಿದ್ದಾರೆ.

ಯತ್ನಾಳ್‌ಗೆ ಏನಾದರೂ ಇದ್ರೆ ನಾಲ್ಕು ಗೋಡೆ ಮಧ್ಯೆ ಇದ್ದು ಬಗೆಹರಿಸಿಕೊಳ್ಳಬೇಕು, ಕಳೆದ ಉಪಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆದ್ದಿದ್ದು ಯಡಿಯೂರಪ್ಪರಿಂದಲೇ, ಈಗ ಎರಡು ಚುನಾವಣೆಗಳಲ್ಲೂ ಅವರ ನಾಯಕತ್ವದಲ್ಲೇ ಗೆಲ್ಲುತ್ತೇವೆ ಎಂದವರು ತಿಳಿಸಿದ್ದಾರೆ.

ಪ್ರತೇಕವಾಗಿ ಮಾತನಾಡಿದ ರೇಣುಕಾಚಾರ್ಯ ಯತ್ನಾಳರ ಹೇಳಿಕೆ ವೈಯಕ್ತಿಕ. ಅವರು ಯಾವಾಗ ಯಾರನ್ನ ಟೀಕೆ ಮಾಡ್ತಾರೋ ಗೊತ್ತಾಗುವುದಿಲ್ಲ. ಯಾರನ್ನ ವೈಭವೀಕರಿಸ್ತಾರೋ ಗೊತ್ತಿಲ್ಲ. 2007 ರಲ್ಲಿ ಜಗದೀಶ್ ಶೆಟ್ಟರ್ ಎತ್ತಿಕೊಡುವ ಕೆಲಸ ಮಾಡಿದ್ದರು. ಯತ್ನಾಳ್ ಬಗ್ಗೆ ನನಗೆ ಅಪಾರ ಗೌರವವಿದೆ, ಅವರಿಗೆ ನಾಯಕತ್ವದ ಲಕ್ಷಣಗಳಿವೆ. ಅವರು ಹಿಂದೂ ಹುಲಿ ಅಂತ ನಾನೇ ಕರೆದಿದ್ದೆ. ಎಂಎಲ್‌ಸಿ ಆಗಿದ್ದಾಗ ಶೆಟ್ಟರ್, ಜೋಶಿ ವಿರುದ್ಧ ಟೀಕೆ ಮಾಡಿದ್ದರು ಎಂದು ಹೇಳಿದ್ದಾರೆ.

# ಉಸಿರಿರುವುದರೊಳಗೆ ಹೆಸರುಳಿಯುವ ಕೆಲಸ ಮಾಡಬೇಕು

### ದೇವರಗುಡ್ಡದ ಕಾರ್ಯಕ್ರಮದಲ್ಲಿ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಹಿತನುಡಿ




ರಾಣೇಬೆನ್ನೂರು, ಅ. 20 - ಕಷ್ಟ ಕಾಲದಲ್ಲಿ ಸಹಾಯ ಮಾಡುವವರು ಸದಾ ಕಾಲವೂ ನೆನಪಿನಲ್ಲಿರುತ್ತಾರೆ. ಉಸಿರು ನಿಲ್ಲುವುದರೊಳಗೆ ಹೆಸರು ಉಳಿಯುವಂತೆ ಕೆಲಸ ಮಾಡಬೇಕು ಎಂದು ಹರಿಹರ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ನುಡಿದರು.

ದೇವರಗುಡ್ಡದ ಶ್ರೀ ಮಾಲತೇಶ ದೇವಸ್ಥಾನದ ಪ್ರಧಾನ ಅರ್ಚಕ ಸಂತೋಷ ಪೂಜಾರ ಅವರು ಗ್ರಾಮಕ್ಕೆ ನೀಡಿದ ಉಚಿತ ಅಂಬ್ಯುಲೆನ್ಸ್‌ಗೆ ಚಾಲನೆ ನೀಡಿ ಶ್ರೀಗಳು ಉಪದೇಶಿಸುತ್ತಿದ್ದರು.

ಜನಪರ ಕೆಲಸ ಮಾಡುವಲ್ಲಿ ನಿಂದನೆಗಳು ಸಾಮಾನ್ಯ. ಅವುಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ ನಿಮ್ಮ ಕೆಲಸಗಳನ್ನ ಸಾಕಾರಗೊಳಿಸಿಕೊಳ್ಳಬೇಕು. ಆ ನಿಂದಕರಿಂದ ನಿಮ್ಮ ಕೆಲಸಗಳಿಗೆ ಮಹತ್ವ ಹೆಚ್ಚುತ್ತದೆ ಎಂದು ಶ್ರೀಗಳು ಹೇಳಿದರು.

ದೇವರು ವರ ಕೊಟ್ಟರೂ ಪೂಜಾರಿ ಕೊಡಲಿಲ್ಲ ಎನ್ನುವ ನಾಣ್ಣುಡಿಯನ್ನು, ದೇವರಗುಡ್ಡ ಹಾಗೂ ಸುತ್ತಲಿನ ಗ್ರಾಮಗಳ ಜನತೆಯ ಕಷ್ಟ-ಕಾರ್ಪಣ್ಯಗಳಿಗೆ ಸ್ಪಂದಿಸುತ್ತಿರುವ ಸಂತೋಷ ಪೂಜಾರ ಅವರ ಅಂಬ್ಯುಲೆನ್ಸ್ ಕೊಡುಗೆ ಸುಳ್ಳಾಗಿಸಿದೆ ಎಂದು ಶ್ರೀಗಳು ಸಭಿಕರ ಕರತಾಡನದ ಮಧ್ಯೆ ನುಡಿದರು.

ಶಾಸಕ ಅರುಣಕುಮಾರ ಪೂಜಾರ ಮಾತನಾಡಿದರು.

ಆಪತ್ ಕಾಲದಲ್ಲಿ ಸಾರಿಗೆ ವ್ಯವಸ್ಥೆ ದೊರಕದ್ದರಿಂದ ಹೃದಯ ಬೇನೆಯಿಂದ ನರಳಿದ ನನ್ನ ತಾಯಿಯನ್ನು ಉಳಿಸಿಕೊಳ್ಳಲು ನನ್ನಿಂದ ಆಗಲಿಲ್ಲ. ಅಂದು ನನಗಾದ ನೋವು ಈ ಭಾಗದ ಜನರಿಗೆ ಆಗಬಾರದು ಎಂದು ಉಚಿತವಾಗಿ ಅಂಬ್ಯುಲೆನ್ಸ್ ಸೇವೆಯನ್ನು ಪ್ರಾರಂಭಿಸಿರುವುದಾಗಿ ಸಂತೋಷ ಭಟ್ ಪೂಜಾರ ಹೇಳಿದರು.

ಪ್ರಾಧಿಕಾರದ ಅಧ್ಯಕ್ಷ ಚೋಳಪ್ಪ ಕಸವಾಳ, ಜಿಪಂ ಮಾಜಿ ಅಧ್ಯಕ್ಷ ಮಂಜುನಾಥ ಓಲೇಕಾರ, ಪಂಚಮಸಾಲಿ ಪೀಠದ ಧರ್ಮದರ್ಶಿ ಹರಿಹರದ ಚಂದ್ರಶೇಖರ್ ಪೂಜಾರ ಮತ್ತಿತರರು ಪಾಲ್ಗೊಂಡಿದ್ದರು.

## ಪರ - ವಿರೋಧಿಗಳಲ್ಲಿ ಅರ್ಧದಷ್ಟು ಜನರಿಗೆ ಕೃಷಿ ಕಾಯ್ದೆ ಗೊತ್ತಿಲ್ಲ

ನವದೆಹಲಿ, ಅ. 20 – ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಕೃಷಿ ಕಾಯ್ದೆಗಳನ್ನು ಬೆಂಬಲಿಸುತ್ತಿರುವ ಹಾಗೂ ವಿರೋಧಿಸುತ್ತಿರುವವರಲ್ಲಿ ಅರ್ಧದಷ್ಟು ಜನರಿಗೆ ಅದರ ಬಗ್ಗೆ ಮಾಹಿತಿಯೇ ಇಲ್ಲ ಎಂದು ಗಾಂವ್ ಕನೆಕ್ಷನ್ ನಡೆಸಿದ ಸಮೀಕ್ಷೆ ತಿಳಿಸಿದೆ.

ಕೃಷಿ ಕಾನೂನುಗಳ ಬಗ್ಗೆ ರೈತರ ನಿಲುವುಗಳ ಕುರಿತು ಸಮೀಕ್ಷೆ ನಡೆಸಿದ್ದ ಸಂಸ್ಥೆ, ಸಮೀಕ್ಷೆಯಲ್ಲಿ ಭಾಗಿಯಾದವರಲ್ಲಿ ಶೇ.52ರಷ್ಟು ಜನ ಶಾಸನಗಳನ್ನು ವಿರೋಧಿಸಿದ್ದಾರೆ. ಆದರೆ, ಇವರಲ್ಲಿ ಶೇ.36ರಷ್ಟು ಜನರಿಗೆ ಶಾಸನಗಳಲ್ಲಿರುವ ಅಂಶಗಳು ತಿಳಿದಿಲ್ಲ.

ಇದೇ ರೀತಿ ಶಾಸನಗಳಿಗೆ ಬೆಂಬಲಿಸುತ್ತಿರುವ ಶೇ.35ರಷ್ಟು ಜನರ ಪೈಕಿ ಶೇ.18ರಷ್ಟು ಜನರಿಗೆ ಅದರಲ್ಲಿರುವ ಮಾಹಿತಿ ಗೊತ್ತಿಲ್ಲ ಎಂದು ಸಮೀಕ್ಷೆ ಹೇಳಿದೆ.

ಅಕ್ಟೋಬರ್ 3ರಿಂದ ಅಕ್ಟೋಬರ್ 9ರ ನಡುವೆ 16 ರಾಜ್ಯಗಳ 53 ಜಿಲ್ಲೆಗಳಲ್ಲಿ ಈ ಸಮೀಕ್ಷೆಗಳನ್ನು ನಡೆಸಲಾಗಿತ್ತು. ಒಟ್ಟಾರೆ 5,022 ರೈತರಿಂದ ಅಭಿಪ್ರಾಯ ಸಂಗ್ರಹಿಸಲಾಗಿತ್ತು.

## ಹೊನ್ನಾಳಿಗೆ ನಾಳೆ ಸಚಿವ ಕೆ.ಎಸ್. ಈಶ್ವರಪ್ಪ



ದಾವಣಗೆರೆ ಅ.20 - ಗ್ರಾಮೀಣಾಭಿವೃದ್ದಿ ಹಾಗೂ ಪಂಚಾಯತ್ ರಾಜ್ ಸಚಿವರಾದ ಕೆ.ಎಸ್ ಈಶ್ವರಪ್ಪ ಅವರು ನಾಡಿದ್ದು ದಿನಾಂಕ 22 ರ ಗುರುವಾರ ಹೊನ್ನಾಳಿಗೆ ಆಗಮಿಸಲಿದ್ದಾರೆ. ಅಂದು ಮಧ್ಯಾಹ್ನ 2 ಗಂಟೆಗೆ ಬೆಂಗಳೂರಿನಿಂದ ಹೊರಟು ಸಂಜೆ 6.30 ಕ್ಕೆ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಹಿರೇಕಲ್ಮಠಕ್ಕೆ ಆಗಮಿಸುವರು. ಬಳಿಕ ಸ್ಥಳೀಯವಾಗಿ ನಡೆಯುವ ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಸಚಿವರು ರಾತ್ರಿ 8.30ಕ್ಕೆ ಬೆಂಗಳೂರಿಗೆ ತೆರಳುವರು.

## ಜಿಲ್ಲಾ ವಕ್ಫ್ ಬೋರ್ಡ್ ಕಮಿಟಿಗೆ ಹರಪನಹಳ್ಳಿ ಬಿ. ನಜೀರ್ ಅಹ್ಮದ್



ಹರಪನಹಳ್ಳಿ, ಅ.20 - ವಕ್ಫ್ ಬೋರ್ಡ್ ಬಳ್ಳಾರಿ ಜಿಲ್ಲಾ ಸಮಿತಿಗೆ ಇಲ್ಲಿನ ಕಾಂಗ್ರೆಸ್ ಮುಖಂಡ ಬಿ. ನಜೀರ್ ಅಹ್ಮದ್ ಅವರನ್ನು ನೇಮಕ ಮಾಡಲಾಗಿದೆ.

# ಸಾಮಾಜಿಕ ನ್ಯಾಯದಡಿಯಲ್ಲಿ ಕೆಲಸ ನಿರ್ವಹಿಸಿ




### ಪಿಡಿಒಗಳಿಗೆ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಕಾರ್ಯಕ್ರಮದಲ್ಲಿ ಸದಸ್ಯ ಕಾರ್ಯದರ್ಶಿಯೂ ಆದ ನ್ಯಾಯಾಧೀಶ ಸಾಬಪ್ಪ ಕರೆ

ದಾವಣಗೆರೆ, ಅ.20 - ಬಡತನ ನಿರ್ಮೂಲನೆ ಯೋಜನೆ 2015ರ ಸರ್ಕಾರದ ಯೋಜನೆಗಳನ್ನು ತಲುಪಿಸಲು ಹಳ್ಳಿ ಮತ್ತು ನಗರ ಪ್ರದೇಶಗಳಲ್ಲಿ ಯಾವುದೇ ಒತ್ತಡಕ್ಕೆ ಮಣಿಯದೆ ಸಾಮಾಜಿಕ ನ್ಯಾಯದಡಿಯಲ್ಲಿ ಪ್ರತಿಯೊಬ್ಬ ಬಡ ಜನತೆಗೂ ಸೌಲಭ್ಯಗಳು ಸಿಗುವಂತೆ ಕೆಲಸ ನಿರ್ವಹಿಸಬೇಕು ಎಂದು ರಾಜ್ಯಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯೂ ಆದ ನ್ಯಾಯಾಧೀಶ ಸಾಬಪ್ಪ ಅವರು ಪಿಡಿಒಗಳಿಗೆ ಕರೆ ನೀಡಿದ್ದಾರೆ.

ನಗರದ ಹಳೆ ಕೋರ್ಟ್ ಸಂಭಾಗಣದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಹಾಗು ಇತರೆ ಸಂಘ-ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಇಂದು ಆಯೋಜಿಸಲಾಗಿದ್ದ ಪಿಡಿಒಗಳಿಗೆ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು.

ಇಂದು ಬೀದಿಯಲ್ಲಿ ಅನೇಕ ಮಕ್ಕಳು ಭಿಕ್ಷೆ ಬೇಡುತ್ತಾ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಆ ಮಕ್ಕಳಿಗೆ ಶೈಕ್ಷಣಿಕ ವ್ಯವಸ್ಥೆ ಕಲ್ಪಿಸಬೇಕು. ಕೆಲವು ಬಡಜನರಿಗೆ ವೈದ್ಯಕೀಯ ವೆಚ್ಚ ಭರಿಸಲಾಗುತ್ತಿಲ್ಲ. ಬಾಲ್ಯವಿವಾಹ, ದೇವದಾಸಿ ಪದ್ಧತಿ, ಬಡವರಿಗೆ ವಸತಿ ವ್ಯವಸ್ಥೆ ಕಲ್ಪಿಸುವುದು ನಮ್ಮ ಎಲ್ಲಾ ಇಲಾಖೆಗಳ ಆದ್ಯ ಕರ್ತವ್ಯವಾಗಿದೆ ಎಂದರು.

ಗ್ರಾಮ ಮಟ್ಟದಲ್ಲಿ ರಾಜಕೀಯ ಒತ್ತಡಗಳಿಂದ ಕೆಲವು ಫಲಾನುಭವಿ ಯೋಜನೆಗಳು ಬಡಜನತೆಗೆ ಸರಿಯಾಗಿ ಸಿಗುತ್ತಿಲ್ಲ, ಅದರಿಂದ ವಂಚಿತರಾಗಿದ್ದಾರೆ. ಗ್ರಾಮ ಮಟ್ಟದಲ್ಲಿ ಪಿಡಿಓಗಳು ಸರಿಯಾಗಿ ಅಧ್ಯಯನ ಮಾಡಿ ಸೌಲಭ್ಯ ವಂಚಿತ ಬಡಜನತೆಗೆ ಯೋಜನೆಗಳನ್ನು ತಲುಪಿಸಿ ಎಂದು ಸೂಚಿಸಿದರು.

ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಅರುಣಕುಮಾರ್ ಎಲ್. ಹೆಚ್. ಮಾತನಾಡಿ, ರಾಜ್ಯ ಕಾನೂನು ಸೇವಾ ಪ್ರಾಧಿಕಾರವು ಒಂದು ನ್ಯಾಯಲಯವಿದ್ದಂತೆ. ಈ ಪ್ರಾಧಿಕಾರದಲ್ಲಿ ವಕೀಲರ ಅವಶ್ಯಕತೆ ಇಲ್ಲ. ನೊಂದವರು ಅರ್ಜಿ ನೀಡಿ ಯಾವುದೇ ಶುಲ್ಕವಿಲ್ಲದೇ ಇಲ್ಲಿಯೂ ಕೂಡ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು. ಮುಂದಿನ ದಿನಗಳಲ್ಲಿ ಹೋಬಳಿ ಮಟ್ಟದಲ್ಲಿಯೂ ಕೂಡ ಒಂದು ನ್ಯಾಯಾಲಯದ ವ್ಯವಸ್ಥೆ ಮಾಡಲು ಸುಪ್ರೀಂಕೋರ್ಟ್ ತೀರ್ಮಾನಿಸಿದೆ ಎಂದು ತಿಳಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ಪ್ರಸ್ತುತ ಬಾಲ್ಯ ವಿವಾಹಗಳು ತುಂಬಾ ನಡೆಯುತ್ತಿವೆ. ಇದರಿಂದ ಮಕ್ಕಳ ಮೇಲೆ ಅನೇಕ ದುಷ್ಪರಿಣಾಮಗಳಾಗುತ್ತಿದ್ದು, ಅದರ ಬಗ್ಗೆ ಜನರಿಗೆ ಜಾಗ್ರತೆಯನ್ನು ಮತ್ತು ಇದರ ಜೊತೆಗೆ ಶಿಕ್ಷಣದ ಬಗ್ಗೆ ಅರಿವು ಮೂಡಿಸಬೇಕು, ಕೆಲವು ಹಳ್ಳಿಗಳಲ್ಲಿ ಇಂದಿಗೂ ಕೂಡಾ ದೇವದಾಸಿ ಪದ್ಧತಿ, ಕೆಲವು ಅನಿಷ್ಟ ಪದ್ಧತಿಗಳು ಇವೆ. ಇವುಗಳನ್ನು ತೊಡೆದುಹಾಕಲು ನಾವೆಲ್ಲರೂ ಶ್ರಮ ಪಡಬೇಕು ಎಂದರು.

## ಪಂಚಮಸಾಲಿ ಪೀಠದಲ್ಲಿ ನವದುರ್ಗೆಯರ ಪ್ರತಿಷ್ಠಾಪನೆ



ಹರಿಹರ, ಅ.20- ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ವಿಜಯದಶಮಿ ಮತ್ತು ನವರಾತ್ರಿ ಅಂಗವಾಗಿ ನವದುರ್ಗೆಯರ ಪ್ರತಿಷ್ಠಾಪನೆ ಮತ್ತು ಪೂಜಾ ಕೈಂಕರ್ಯಗಳನ್ನು ಜಿಲ್ಲಾ ಮತ್ತು ನಗರ ಹರಿಹರ ತಾಲ್ಲೂಕು ಪಂಚಮಸಾಲಿ ಮಹಿಳಾ ಘಟಕದ ವತಿಯಿಂದ ನಡೆಸಲಾಯಿತು.

ಘಟಸ್ಥಾಪನೆಯನ್ನು ಶ್ರೀಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ ಮತ್ತು ಶ್ರೀಮತಿ ಗಿರಿಜಾ ಉಮಾಪತಿ ದಂಪತಿ ಚಾಲನೆ ನೀಡಿದರು. ಶ್ರೀ ಪೀಠದಲ್ಲಿ ನವದುರ್ಗಾ ಆರಾಧನೆ ಪೂಜಾ ಕೈಂಕರ್ಯಗಳು ನೆರವೇರಲಿವೆ.

ಈ ಸಂದರ್ಭದಲ್ಲಿ ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷರಾದ ಶ್ರೀಮತಿ ರಶ್ಮಿ ನಾಗರಾಜ್ ಕುಂಕೋದ್, ಹರಿಹರ ತಾಲ್ಲೂಕು ಅಧ್ಯಕ್ಷರಾದ ಶ್ರೀಮತಿ ಸಂಗೀತ ಗಣೇಶ್, ದಾವಣಗೆರೆ ನಗರ ಅಧ್ಯಕ್ಷರಾದ ಶ್ರೀಮತಿ ವಾಣಿ ಗುರು, ಶ್ರೀಮತಿ ಶಶಿಕಲಾ ಶಿವಲಿಂಗಪ್ಪ, ಶ್ರೀಮತಿ ವೀಣಾ ಕೊಟ್ರೇಶ್, ಶ್ರೀಮತಿ ಕೊಟ್ರಮ್ಮ ಮುರುಗೇಶ್, ಶ್ರೀಮತಿ ನಾಗವೇಣಿ, ಶ್ರೀಮತಿ ಐಗೂರ್ ಗೌರಮ್ಮ, ಶ್ರೀಮತಿ ವೇದ, ಶ್ರೀಮತಿ ಮಂಜುಳ ಮಹೇಶ್, ರಾಜ್ಯ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಶ್ರೀಮತಿ ವಸಂತ ಹುಲ್ಲತ್ತಿ, ಶ್ರೀಮತಿ ಪೂರ್ಣಿಮಾ ಬೆನ್ನೂರ್, ಶೋಭಾ ಕವಲೆತ್ತು ಮತ್ತಿತರರು ಉಪಸ್ಥಿತರಿದ್ದರು.

## ಐಎಂಎ ಹಗರಣ : ಮೂವರು ಪೊಲೀಸರ ಅಮಾನತ್ತು

ಬೆಂಗಳೂರು, ಅ. 20 – ಐಎಂಎ ಪೊಂಜಿ ಹಗರಣವನ್ನು ಮುಚ್ಚಿ ಹಾಕುವುದರಲ್ಲಿ ಭಾಗಿಯಾಗಿದ್ದ ಆರೋಪ ಎದುರಿಸುತ್ತಿರುವ ಮೂವರು ಪೊಲೀಸರನ್ನು ಅಮಾನತ್ತುಗೊಳಿಸಲಾಗಿದೆ. ಡಿ.ಎಸ್.ಪಿ. ಇ.ಬಿ. ಶ್ರೀಧರ, ಪೊಲೀಸ್ ಇನ್ಸ್‌ಪೆಕ್ಟರ್ ಎಂ. ರಮೇಶ್ ಹಾಗೂ ಸಬ್ ಇನ್ಸ್‌ಪೆಕ್ಟರ್ ಪಿ. ಗೌರಿಶಂಕರ್ ಅವರನ್ನು ಅಮಾನತ್ತುಗೊಳಿಸಿ ಮೂರು ದಿನಗಳ ಹಿಂದೆ ಆದೇಶ ಹೊರಡಿಸಲಾಗಿದೆ. ಈ ಪೊಲೀಸರು ಹಗರಣದಿಂದ ಜನರನ್ನು ರಕ್ಷಿಸುವ ಬದಲು ಹಗರಣದ ರೂವಾರಿ ಮೊಹಮ್ಮದ್ ಮನ್ಸೂರ್ ಖಾನ್ ರಕ್ಷಿಸಿದ್ದರು ಎಂದು ಸಿಬಿಐ ಆರೋಪಿಸಿ ಪ್ರಕರಣ ದಾಖಲಿಸಿದೆ. ಐ.ಎಂ.ಎ. ಹಗರಣದಲ್ಲಿ ಸುಮಾರು 4 ಲಕ್ಷ ಜನರಿಗೆ 4,000 ಕೋಟಿ ರೂ.ಗಳನ್ನು ವಂಚಿಸಲಾಗಿದೆ.




JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte